ಐಕ್ಯರಂಗ

ವಾರ ಪತ್ರಿಕೆ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 9 ಸಂಚಿಕೆ 44 ನವಂಬರ್ 1, 1987 ಬೆಲೆ 1 ರೂ.

ಒಳಗಿನ ಪುಟಗಳಲ್ಲಿ

ರಾಜ್ಯೋತ್ಸವ ವಿಶೇಷ ಲೇಖನ — ಪುಟ4-5
- ★ ಭಾಷೆಯ ಬಗ್ಗೆ ಅಭಿಮಾನವೆಂಬುದು ಹೇಗಿರಬೇಕು
- ★ ಮೂವತ್ತೊಂದಕ್ಕೆ ಕಾಲಿಟ್ಟ ಕರ್ನಾಟಕ ರಾಜ್ಯ

ರಾಜಕೀಯ ವಿಶ್ಲೇಷಣೆ — ಪುಟ-2
- ★ ಅಮೇರಿಕನ್ ಪಿತೂರಿಗಳಿಗೆ ರಾಜೀವ್ ಧೋರಣೆಗಳ ನೆರವು

ದೇಶ-ವಿದೇಶ — ಪುಟ 7
- ★ ಪರಮಾಣು ನಿರ್ಬಂಧಕ್ಕೆ ಗೊರ್ಬಚೇವ್ ಪ್ರಸ್ತಾಪ
- ★ ಥ್ಯಾಚರ್ ಸರ್ಕಾರ ಮತ್ತೆ ರಾಜಕೀಯ ಆಪತ್ತಿನಲ್ಲಿ
- ★ ವಿದೇಶಿ ಸಂಕ್ಷಿಪ್ತ ಸುದ್ದಿಗಳು
- ★ ಪ.ಬಂಗಾಳ ವಿಧಾನಸಭೆಯಲ್ಲಿ ಕಾಂಗ್ರೆ ಗಲಭೆ
- ★ ತ್ರಿಪುರದಲ್ಲಿ ಬಿ.ಜೆ.ಪಿ. ಮಿಥ್ಯಾರೋಪ

ವಿವಿಧ ಸುದ್ದಿಗಳು — ಪುಟ3-6
- ★ ರಾಜ್ಯಾದ್ಯಂತ ರೈತ ಸಂಘದ ಘಟಕಗಳ ರಚನೆ
- ★ ಜೆ.ಎನ್.ಯು.ನಲ್ಲಿ ಎಸ್.ಎಫ್.ಐ.ಜಯ
- ★ ಡಿ.ವೈ.ಎಫ್.ಐ. ಸಮ್ಮೇಳನ-ಸಮಾವೇಶಗಳು

ರಾಜೀವ್‌ಗಾಂಧಿ ರಾಜೀನಾಮೆಗೆ ಒತ್ತಾಯಿಸಿ

ರಾಜ್ಯದೆಲ್ಲೆಡೆ ಯಶಸ್ವಿ ರಾಜಕೀಯ ಸಮಾವೇಶ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕೇಂದ್ರ ಸಮಿತಿ ದೇಶದ ಮುಂದಿಟ್ಟ 17 ಅಂಶಗಳ ಬದಲಿ ಧೋರಣೆಯ ಬೇಡಿಕೆಗಳಿಗಾಗಿ ರಾಜ್ಯದ ಜನತೆಯನ್ನು ಜಾಗೃತಗೊಳಿಸಿ ಅಕ್ಟೋಬರ್ 25 ರಿಂದ 31 ರವರೆಗೆ ರಾಜ್ಯಾದ್ಯಂತ ರಾಜಕೀಯ ಸಮಾವೇಶಗಳನ್ನು ಸಂಘಟಿಸಲು ರಾಜ್ಯ ಸಮಿತಿಯ ಕರೆಯ ಮೇರೆಗೆ ವಿವಿಧ ಜಿಲ್ಲೆಗಳಲ್ಲಿ ಯಶಸ್ವಿಯಾಗಿ ಸಮಾವೇಶಗಳು ನಡೆದಿವೆ.

ಸ್ವತಂತ್ರ ಭಾರತದ 40 ವರ್ಷಗಳ ಕಾಂಗ್ರೆಸ್ ದುರಾಡಳಿತದಲ್ಲಿ ದೇಶದ ಜನತೆ ಸಹಿಸಲಾಸಾಧ್ಯವಾಗದ ಪರಿಸ್ಥಿತಿಗೆ ಬಂದು ಮುಟ್ಟಿದೆ. ರಾಜಕೀಯವೆಂಬುದು ಕೇವಲ ಕೆಲವೇ ವ್ಯಕ್ತಿಗಳ ಕೈಯಲ್ಲಿರುವುದಲ್ಲ, ಬಹುಸಂಖ್ಯಾತ ದುಡಿಯುವ ಜನ ಸಮೂಹ ಪಾಲ್ಗೊಳುವಿಕೆಯಾದಾಗಲೇ ಅರ್ಥಪೂರ್ಣವಾಗುವುದು. ಆ ಮೂಲಕವೇ. ಕಾಂಗ್ರೆಸ್‌ಗೆ ಪರ್ಯಾಯವೆಂಬುದು ಮೂಡಿ ಬರಬೇಕೆಂದು ಪಕ್ಷದ ಕೇಂದ್ರ ಸಮಿತಿ ಸದಸ್ಯರು ಹಾಗೂ ರಾಜ್ಯ ಸಮಿತಿ ಕಾರ್ಯದರ್ಶಿಗಳಾದ ಕಾ. ಪಿ. ರಾಮಚಂದ್ರರಾವ್ ಅಕ್ಟೋಬರ್ 25 ರಂದು ಬೆಂಗಳೂರು ಜಿಲ್ಲಾ ಮಟ್ಟದ ರಾಜಕೀಯ ಸಮಾವೇಶದಲ್ಲಿ ಕಿಕ್ಕಿರಿದು ತುಂಬಿದ್ದ ಪ್ರತಿನಿಧಿಗಳನ್ನುದ್ದೇಶಿಸಿ ನಗರದಲ್ಲಿ ಮಾತನಾಡುತ್ತಾ ಕರೆ ನೀಡಿದರು. ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು ಸ್ವಾತಂತ್ರ್ಯದ ಸಂದರ್ಭದಲ್ಲಿ ದಿ. ನೆಹರು ಜನತೆಯನ್ನುದ್ದೇಶಿಸಿ ಮಾತನಾಡುತ್ತಾ ದೇಶದ ಜನಕೋಟಿ ನನ್ನ ಕೈಗೆ ಅಧಿಕಾರದ ಕಡಿವಾಣ ಕೊಟ್ಟಿದೆ. ಸಮಸ್ತ ಜನರ ಕಣ್ಣೀರು ಒರೆಸಿ ಸುಖ ಸಮೃದ್ಧಿ ರಾಜ್ಯ ಕಟ್ಟಲು ದುಡಿಯುತ್ತೇವೆಂದು ಉಚ್ಛರಿಸಿದ್ದರು. ಒಂದಾದ ಮೇಲೊಂದರಂತೆ ಸುಮಾರು 7 ಪಂಚವಾರ್ಷಿಕ ಯೋಜನೆಗಳು ಮುಗಿದಿವೆ. ಆದರೆ ದೇಶದ ಬಡತನ, ದಾರಿದ್ರ್ಯ, ನಿರುದ್ಯೋಗ ದಿನೇ ದಿನೇ ಹೆಚ್ಚುತ್ತಾ ನಡೆದಿವೆ. ಮತ್ತೊಂದೆಡೆ ಕೋಟ್ಯಾಧಿಪತಿಗಳ 75 ಕುಟುಂಬಗಳ ಆಸ್ತಿ ಹೆಚ್ಚುತ್ತಿದೆ. ನಮ್ಮ ಸಂವಿಧಾನ ಬಂಡವಾಳಶಾಹಿಗಳಿಗೆ ಖಾಸಗಿ ಆಸ್ತಿ ಮಾಡುವ ಹಕ್ಕುಗಳನ್ನು ನೀಡಿದೆ. ಆದರ ಘೋಷಣೆಯಲ್ಲಂತೂ ಪ್ರಜಾಸತ್ತಾತ್ಮಕ, ಜಾತ್ಯಾತೀತ, ಸಮಾಜವಾದಿ ಮಾದರಿಯ ಸಮಾಜ ನಿರ್ಮಾಣವಾಗಿಯೇ ಬಿಟ್ಟಿದೆ. ಭೂಸುಧಾರಣೆ, ಗರೀಬಿ ಹಠಾವೋ, ಸಮಾಜವಾದಿ ಸಮಾಜವೆಂಬ ಆಕರ್ಷಕ ಘೋಷಣೆಗಳ ಮೂಲಕ ಸ್ವರ್ಗವನ್ನೇ ತೋರಿಸಲಾಗಿದೆ. ಕೋಟ್ಯಾವಧಿ ನಿರುದ್ಯೋಗ – ಕೈಗಾರಿಕೆಗಳ ಮುಚ್ಚುವಿಕೆ ಭೀಕರ ಬರಗಾಲದಿಂದ ಸಹಸ್ರಾರು ಜನತೆ ಸಾಯುತ್ತಿರುವ ದಾರುಣ ಸ್ಥಿತಿ ದೇಶ ಎದುರಿಸುತ್ತಿದೆ ಎಂದು ಅವರು ವಿವರಿಸಿದರು. ರಾಜೀವ್‌ಗಾಂಧಿ ಸರ್ಕಾರದ ಸಮಯಸಾಧಕ ರಾಜಕೀಯದ ಲಾಭ ಪಡೆದು ಮತೀಯ ಕೋಮುವಾದಿ – ಪ್ರತ್ಯೇಕತಾವಾದಿ ಶಕ್ತಿಗಳು ಮೊಡ್ಡಿರುವ ಸವಾಲಿನ ವಿರುದ್ಧ ದೇಶದಐಕ್ಯತೆ ಸಮಗ್ರತೆ ಕಾಪಾಡಲು ಪ್ರತಿಯೊಬ್ಬ ದೇಶಪ್ರೇಮಿ ಮುಂದಾಗಬೇಕೆಂದು ಕರೆ ನೀಡಿದರು. ಕೇರಳದ ಮುಸ್ಲಿಂಲೀಗ್, ಪಂಜಾಬ್ ಸಿಖ್ ಉಗ್ರಗಾಮಿಗಳ ಜೊತೆ ಸಖ್ಯತೆ ಹೊಂದಿದ್ದ ಕಾಂಗ್ರೆಸ್ ಪಂಜಾಬ್ ಒಪ್ಪಂದದ ಒಂದಂಶವನ್ನೂ ಜಾರಿಗೊಳಿಸಿಲ್ಲ. ಅಸ್ಸಾಂನಲ್ಲಿ 10 ವರ್ಷಗಳಿಂದ ವಾಸವಿರುವ ಜನತೆಯನ್ನು ದೇಶದಿಂದ ಹೊರದೂಡುವಂತಹ ಪ್ರಜಾಪ್ರಭುತ್ವ - ಸಂವಿಧಾನ ವಿರೋಧಿ ಒಪ್ಪಂದವನ್ನು ಅವರು ಟೀಕಿಸಿದರು. ಬೋಫೋರ್ಸ್, ಫೇರ್‌ಫ್ಯಾಕ್ಸ್

(8ನೇ ಪುಟ ನೋಡಿ)

ರಾಷ್ಟ್ರೀಯ ಭಾವೈಕ್ಯತೆಯತ್ತ ದೊಡ್ಡ ಹೆಜ್ಜೆ

ಎಡ ಪಕ್ಷಗಳ ಪ್ರಯತ್ನ ಶೀಲತೆಯಿಂದ ಅಕ್ಟೋಬರ್ 12 ರಂದು ದೆಹಲಿಯಲ್ಲಿ ಯಶಸ್ವಿಯಾಗಿ ನಡೆದ ಕೋಮುವಾದ ಮತ್ತು ಪ್ರತ್ಯೇಕತಾವಾದ ವಿರೋಧಿ ಸಮಾವೇಶದಲ್ಲಿ ದೇಶ ಪ್ರೇಮಿ ಹಾಗೂ ಪ್ರಜಾಪ್ರಭುತ್ವವಾದೀ ಶಕ್ತಿಗಳು ದೇಶವನ್ನು ಹರಿದು ಹಂಚಲು ಪ್ರಯತ್ನಿಸುತ್ತಿರುವ ದುಷ್ಟಶಕ್ತಿಗಳ ವಿರುದ್ಧ ಯುದ್ಧ ಸಾರಿ ಸ್ವತಂತ್ರ ಭಾರತದಲ್ಲಿ ಒಂದು ಹೊಸ ಅಧ್ಯಾಯ ಆರಂಭಿಸಿದವು. ಈ ಸಮಾವೇಶದ ಬಗ್ಗೆ ಕಾಂ.ಸುರ್ಜಿತ್ ಬರೆಯುತ್ತಾರೆ.

ನಮ್ಮ ದೇಶದಲ್ಲಿ ಅತ್ಯಂತ ಸಂದಿಗ್ಧ ರಾಜಕೀಯ ಪರಿಸ್ಥಿತಿಉಂಟಾಗಿದೆ. ಹಿಂದೆಂದೂ ದೇಶದ ಭಾವೈಕ್ಯತೆ ಮತ್ತು ಸಮಗ್ರತೆಗೆ ಇಂತಹ ಗಂಭೀರ ಸವಾಲುಗಳು ಎದುರಾಗಿರಲಿಲ್ಲ. ಸ್ವಾತಂತ್ರ್ಯ ಹೋರಾಟದಿಂದ ನಮಗೆ ಬಂದ ಜಾತ್ಯಾತೀತತೆ ಮತ್ತು ಪ್ರಜಾಪ್ರಭುತ್ವಗಳ ಮೇಲೆ ಕೋಮುವಾದ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳು ಭಾರಿ ಆಕ್ರಮಣ ನಡೆಸಿವೆ. ಆರ್. ಎಸ್. ಎಸ್, ಬಿ. ಜೆ. ಪಿ. ನಾಯಕತ್ವದ ಹಿಂದೂ ಕೋಮುವಾದ ಒಂದು ಕಡೆ, ಜಮಾತೇ – ಇಸ್ಲಾಮಿ, ಖಾಲಿಸ್ತಾನ ಪ್ರತ್ಯೇಕತಾವಾದಿ ಭಯೋತ್ಪಾದಕರು ಇನ್ನೊಂದು ಕಡೆ.ಇದಲ್ಲದೆ ಹರಿಜನ, ಗಿರಿಜನರ ಮೇಲೆ ಆಕ್ರಮಣ, ಅತ್ಯಾಚಾರ ಅವ್ಯಾಹಕವಾಗಿ ನಡೆದಿದೆ. ರಾಜಸ್ತಾನದಲ್ಲಿ 'ಸತಿ' ಪದ್ಧತಿಯನ್ನು ಪುನಃ ಪ್ರಚಾರಕ್ಕೆ ತರಲು ಸಂಪ್ರದಾಯವಾದಿ ಶಕ್ತಿಗಳ ಪ್ರಯತ್ನ ಮತ್ತು ರಾಜ್ಯದ ಜನತಾ, ಬಿ.ಜೆ.ಪಿ. ಶಕ್ತಿಗಳು ಅದರಲ್ಲಿ ಶಾಮೀಲಾಗಿರುವುದು, ನಮ್ಮೆಲ್ಲರಿಗೂ ಅತಿ ದೊಡ್ಡ ಸವಾಲು. ಧರ್ಮದ ಆಧಾರದ ಮೇಲೆ ದೇಶದ ರಚನೆಯ ಘೋಷಣೆ ಎಲ್ಲಾ ರೀತಿಯ ಕೋಮುವಾದಿಗಳಿಂದ ಬರುತ್ತಿದೆ.

ಕೋಮುವಾದಿ, ಪ್ರತ್ಯೇಕತಾವಾದಿ ಶಕ್ತಿಗಳ ಜತೆ ರಾಜಿ ಮಾಡಿಕೊಳ್ಳುವ ಮೂಲಕ, ತನ್ನ ಆರ್ಥಿಕ ರಾಜಕೀಯ ಧೋರಣೆಗಳ ಮೂಲಕ ಜನತೆಯನ್ನು ಆಳುವ ಪಕ್ಷ ಈ ಶಕ್ತಿಗಳತ್ತ ತಳ್ಳುತ್ತಿದೆ. ಆದ್ದರಿಂದ ಆಳುವ ಪಕ್ಷದ ವಿರುದ್ಧ ಹೋರಾಟ, ಈ ಶಕ್ತಿಗಳ ವಿರುದ್ಧದ ಹೋರಾಟವನ್ನು ಅಗತ್ಯವಾಗಿ ಒಳಗೊಳ್ಳಬೇಕು. ಆಳುವ ಪಕ್ಷವನ್ನು ಅಧಿಕಾರದಿಂದ ಇಳಿಸುವ ತರಾತುರಿಯಲ್ಲಿ ಕೆಲವು ಬೂರ್ಜ್ವಾ ವಿರೋಧ ಪಕ್ಷಗಳು, ಈ ಬಗ್ಗೆ ತಕ್ಕ ಪ್ರಾಮುಖ್ಯತೆ ಕೊಟ್ಟಿಲ್ಲ. ಸಾಮ್ರಾಜ್ಯಶಾಹಿಯ ಆಟ ಅವರ ಗಮನಕ್ಕೆ ಬಂದಿಲ್ಲ. ಈ ಹಿನ್ನೆಲೆಯಲ್ಲಿ ನಾಲ್ಕು ಎಡ ಪಕ್ಷಗಳು –ಸಿ.ಪಿ.ಐ. (ಎಂ), ಸಿ. ಪಿ. ಐ., ಫಾರ್ವರ್ಡ್ ಬ್ಲಾಕ್, ಆರ್. ಎಸ್. ಪಿ. ಅಕ್ಟೋಬರ್ 12ರಂದು ಕೋಮುವಾದ ಪ್ರತ್ಯೇಕತಾವಾದದ ವಿರುದ್ಧ ಸಮಾವೇಶ ನಡೆಸಿದವು. ಈ ಸಮ್ಮೇಳನಕ್ಕೆ ಜಾತ್ಯಾತೀತ ಪಕ್ಷಗಳು, ಸಂಘಟನೆಗಳು, ಬುದ್ಧಿ ಜೀವಿಗಳನ್ನು ಕರೆಯಲಾಗಿತ್ತು. ಸಮ್ಮೇಳನ ಅದ್ಭುತ ಯಶಸ್ಸು ಪಡೆಯಿತು. ಭಾರಿ ಸಂಖ್ಯೆಯಲ್ಲಿ ಭಾಗವಹಿಸಿ, ದೇಶದ ಭಾವೈಕ್ಯತೆ, ಸಮಗ್ರತೆಯನ್ನು ರಕ್ಷಿಸುವ ಪಣ ತೊಡಲು ತಯಾರಾಗಿರುವ ಶಕ್ತಿಗಳು ಪ್ರಬಲವಾಗಿದೆ ಎಂಬುದು ಸಮಾಧಾನಕರ ಅಂಶ.

(8ನೇ ಪುಟ ನೋಡಿ)

ಮೂವತ್ತೊಂದಕ್ಕೆ ಕಾಲಿಟ್ಟ ಕರ್ನಾಟಕ ರಾಜ್ಯ

–ಎನ್. ಕೆ. ಉಪಾಧ್ಯಾಯ

ಕರ್ನಾಟಕ ರಾಜ್ಯಕ್ಕೆ ಮೂವತ್ತೊಂದು ತುಂಬಿದೆ. ದೇಶದ
ಹಾಗೂ ರಾಜ್ಯದ ವಿಚಿತ್ರ ರಾಜಕೀಯ ಪರಿಸ್ಥಿತಿಯಲ್ಲಿ ರಾಜ್ಯೋತ್ಸವ
ವನ್ನು ಆಚರಿಸುತ್ತಿದ್ದೇವೆ. ಯಾವ ರೀತಿ ಜನತೆ ದೇಶದ ಸ್ವಾತಂತ್ರ್ಯೋ
ತ್ಸವದಲ್ಲಿ ಆಸಕ್ತಿ ಕಳಕೊಂಡಿದ್ದಾರೋ ಹಾಗೆಯೇ ಕರ್ನಾಟಕ
ರಾಜ್ಯೋತ್ಸವದ ಗತಿಯಾಗಿದೆ. ಸ್ವಾತಂತ್ರ್ಯದ ಗುರಿಯನ್ನು ಸಾಧಿಸು
ವುದರಲ್ಲಿ ಹೇಗೆ ಕಾಂಗ್ರೆಸ್ ಪಕ್ಷ ವಿಫಲಗೊಂಡಿದೆಯೋ ಹಾಗೆಯೇ
ಕರ್ನಾಟಕದಲ್ಲಿ ಹಿಂದಿನ ಕಾಂಗ್ರೆಸ್ ಈಗಿನ ಜನತಾಪಕ್ಷ ಆಡಳಿತೆ ಜನರ
ಆಶೋತ್ತರಗಳನ್ನು ಪೂರೈಸದೆ ಅಸಮಾಧಾನದ ಹೊಗೆ ಎಬ್ಬಿಸಿದೆ.
ಕಾಂಗ್ರೆಸ್ ಆಡಳಿತೆಯಲ್ಲಿ ಬೆಲೆ ಹೆಚ್ಚಳ, ಭ್ರಷ್ಟಾಚಾರ, ನಿರುದ್ಯೋಗ,
ಬಡತನ, ಕಾರ್ಖಾನೆಗಳು ಮುಚ್ಚುವಿಕೆ, ನಿರಕ್ಷರತೆ ಮೊದಲಾದವುಗಳ
ಹಾವಳಿ, ಛಿದ್ರಕಾರಿ, ಭಯೋತ್ಪಾದಕ ಶಕ್ತಿಗಳಿಂದ ದೇಶದ ಐಕ್ಯತೆಗೆ
ಧಕ್ಕೆ, ಜೀವಕ್ಕೆ ಹಾನಿ ಇವೇ ದಿನನಿತ್ಯದ ಭೀಕರ ದೃಶ್ಯಗಳು.ಕರ್ನಾಟ
ಕದ ಜನತಾ ಆಳ್ವಿಕೆಯಲ್ಲೂ ಬಲವಾಗಿ ಬೇರೂರಿದ ಭ್ರಷ್ಟಾಚಾರ,
ಜಾತೀವಾದಿ ಗುಂಪುಗಳು, ಆಡಳಿತೆಯಲ್ಲಿ ಅದಕ್ಷತೆ, ಬೆಲೆಹೆಚ್ಚಳ,
ಕಾರ್ಖಾನೆಗಳ ಮುಚ್ಚುವಿಕೆ, ನಿರುದ್ಯೋಗದ ಹಾವಳಿ, ನೀರು ವಿದ್ಯು
ಚ್ಛಕ್ತಿ ರಂಗದಲ್ಲಿ ವೈಫಲ್ಯ ಇವು ಎದ್ದು ಕಾಣುತ್ತವೆ.

ಕರ್ನಾಟಕ ಪ್ರಾಂತ ರಚನೆಯಾದಾಗ ವಿದ್ಯುಚ್ಛಕ್ತಿಯಲ್ಲಿ
ಪ್ರಥಮ ಸ್ಥಾನದಲ್ಲಿದ್ದ ರಾಜ್ಯ ಈಹೊತ್ತು ವಿದ್ಯುತ್ತಿಗಾಗಿ ನೆರೆ
ಪ್ರಾಂತದವರಿಗೆ ಕೈಯೊಡ್ಡಬೇಕಾಗಿ ಬಂದಿದೆ. ಒಂದೆಡೆ ವಿದ್ಯುಚ್ಛಕ್ತಿ
ದರದಲ್ಲಿ ಅಪಾರ ಹೆಚ್ಚಳವಾದರೆ, ಮತ್ತೊಂದೆಡೆ ವಿದ್ಯುಚ್ಛಕ್ತಿ ಕಡಿತ.
ಅದರ ಪರಿಣಾಮವಾಗಿ ಕೈಗಾರಿಕೆಗಳ ಮುಚ್ಚುವಿಕೆ, ನಿರುದ್ಯೋಗದಲ್ಲಿ
ಹೆಚ್ಚಳ ಉತ್ಪಾದನೆಯಲ್ಲಿ ಕಡಿತ, ವಸ್ತುಗಳ ಬೆಲೆಯಲ್ಲಿ ಏರಿಕೆ ರೈತರ
ಪಂಪ್‌ಸೆಟ್ಟುಗಳಿಗೂ ವಿದ್ಯುತ ಕಡಿತದಿಂದಾಗಿ ಬೆಳೆಗೆ ಹಾನಿ. ಆಹಾರ
ಉತ್ಪಾದನೆಯಲ್ಲಿ ಇಳಿಮುಖ ಆಹಾರ ಧಾನ್ಯದ ಬೆಲೆಯಲ್ಲಿ ಏರಿಕೆ.

(5ನೇ ಪುಟ ನೋಡಿ)

ಅಮೆರಿಕನ್ ಪಿತೂರಿಗಳಿಗೆ ರಾಜೀವ್ ಧೋರಣೆಗಳ ನೆರವು

ರಾಷ್ಟ್ರೀಯ ಐಕ್ಯತೆಯ ರಕ್ಷಣೆಯಲ್ಲಿ ವಿಫಲತೆಯಿಂದ ಹಿಡಿದು ಭ್ರಷ್ಟಾಚಾರದವರೆಗೆ ರಾಜೀವ್‌ಗಾಂಧೀ ಸರಕಾರದ ಅಪರಾಧಗಳ ದೊಡ್ಡ ಪಟ್ಟಿಗೆ ಇತ್ತೀಚೆಗೆ ದೇಶದ ರಕ್ಷಣೆ ಮತ್ತು ಭದ್ರತೆಯನ್ನು ಸಾಮ್ರಾಜ್ಯಶಾಹಿ ಏಜನ್ಸಿಗಳಿಗೆ ತೆರೆದು ಕೊಟ್ಟ ದೇಶದ್ರೋಹದ ಆಪಾದನೆಯೂ ಸೇರಿಕೊಂಡಿದೆ. ಪ್ರಧಾನಮಂತ್ರಿಗಳ ಇತ್ತೀಚಿನ ಅಮೆರಿಕಾ ಭೇಟಿಯ ಸಂದರ್ಭದಲ್ಲಿ ಭಾರತ-ಅಮೆರಿಕಾ ಸಂಬಂಧಗಳ ಈ ಅಪಾಯಕಾರೀ ಬೆಳವಣಿಗೆಗಳನ್ನು ಸಿ.ಪಿ.ಐ.(ಎಂ)ನ ಕೇಂದ್ರ ಸಮಿತಿ ಸದಸ್ಯ ಕಾಂ. ಪ್ರಕಾಶ್ ಕಾರಟ್ ಇಲ್ಲಿ ವಿಶ್ಲೇಷಿಸುತ್ತಾ ಇದರ ವಿರುದ್ಧ ಸಮರ ರಾಜೀವ್‌ಗಾಂಧಿ ಸರ್ಕಾರವನ್ನು ಅಧಿಕಾರದಿಂದ ಇಳಿಸುವ ಹೋರಾಟದ ಅಂಗ ಎನ್ನುತ್ತಾರೆ.

ಅಮೆರಿಕನ್ ರಾಯಭಾರಿ ಜಾನ್ ಗುಂಥರ್ ಡೀನ್ ಬಹಳ ಖುಶಿಯಲ್ಲಿದ್ದಾರೆ. ಸಕಾರಣವಾಗಿಯೇ. ಅಕ್ಟೋಬರ್ 9ರಂದು ಫೆಡರೇಶನ್ ಆಫ್ ಇಂಡಿಯನ್ ಚೇಂಬರ್ಸ್ ಆಫ್ ಕಾಮರ್ಸ್‌ನ್ನು ಉದ್ದೇಶಿಸಿ ಅವರು ಮಾಡಿದ ಭಾಷಣದಿಂದ ಇದು ಸ್ಪಷ್ಟವಾಗುತ್ತದೆ. ರಾಜೀವಗಾಂಧಿಯವರು 1985ರಲ್ಲಿ ಅಮೇರಿಕಕ್ಕೆ ಇತ್ತ ಪ್ರಥಮ ಭೇಟಿಯ ನಂತರ ಈ ಎರಡು ವರ್ಷಗಳಲ್ಲಿ ಭಾರತ ಅಮೇರಿಕಾ ಸಂಬಂಧಗಳಲ್ಲಾಗಿರುವ ಅಗಾಧ ಮುನ್ನಡೆಯ ಸಾರವನ್ನು ನೀಡಿದ ರಾಯಭಾರಿ ಡೀನ್‌ರವರ ಭಾಷಣದಿಂದ ಬಹಳಷ್ಟು ಅಂಶಗಳು ಬೆಳಕಿಗೆ ಬಂದಿವೆ. "ಈಗ ಸೂಕ್ಷ್ಮವಾದ ಸೈನಿಕ ಪ್ರತಿಭಯೋತ್ಪಾದಕತೆ ಮತ್ತು ಉಚ್ಛ ತಂತ್ರಜ್ಞಾನ ಕೂಡಾ ರಂಗದ ಮೇಲೆ ಬಂದಿವೆ" ಎಂದು ಅವರು ಕೊಚ್ಚಿಕೊಂಡಿರುವುದು ಗಮನಾರ್ಹ.

ಭಾರತದೊಳಕ್ಕೆ ಅಮೆರಿಕಾ ಎಷ್ಟೊಂದು ಆಳವಾಗಿ ಕೈತೂರಿಸಿದೆ? ಎಂತಹ ರಾಜತಾಂತ್ರಿಕ ಮುನ್ನಡೆ ಸಾಧಿಸಿದೆ ಎಂಬುದರ ಪೂರ್ಣ ಹರಹನ್ನು ರಾಯಭಾರಿ ಡೀನ್‌ರವರು ಈ ರೀತಿ ನೀಡಿರುವುದಕ್ಕಾಗಿ ನಾವು ಅವರಿಗೆ ಧನ್ಯವಾದ ಅರ್ಪಿಸಬೇಕಾಗುತ್ತದೆ. ಯಾಕೆಂದರೆ ಭಾರತ ಸರ್ಕಾರಕ್ಕೆ ಈ ಬೆಚ್ಚನೆಯ ಸಂಬಂಧಗಳ ಬಗ್ಗೆ ಪ್ರಚಾರಮಾಡಲು ಬಹಳ ಹಿಂಜರಿಕೆ. ಅದೂ ಅರ್ಥವಾಗುವಂತಹದೇ. ಡೀನ್ ರವರ ಭಾಷಣ ಅಮೆರಿಕನ್ ಸರ್ಕಾರದೊಂದಿಗೆ ರಾಜೀವ್ ಸರ್ಕಾರದ ಹೆಚ್ಚುತ್ತಿರುವ ಮತ್ತು ಅಪಾಯಕಾರೀ ವಿಲಾಸಚೇಷ್ಟೆಗಳ ಸಮಗ್ರ ಚಿತ್ರಣವನ್ನೇ ನೀಡಿವೆ.

ಕಳೆದ ಎರಡು ವರ್ಷಗಳಲ್ಲೇ ಅದರ ಹಿಂದಿನ ಒಟ್ಟು ಒಂದು ದಶಕದಲ್ಲಿ ತೊಡಗಿಸಿದುದಕ್ಕಿಂತ ಹೆಚ್ಚಿನ ಬಂಡವಾಳವನ್ನು ಅಮೆರಿಕನ್ನರು ತೊಡಗಿಸಿದ್ದಾರಂತೆ. ಅಮೆರಿಕನ್ ಕಂಪೆನಿಗಳು ಕೇವಲ ತಮ್ಮ ಉತ್ಪಾದನೆಗಳಿಗೆ ಲೈಸೆನ್ಸ್ ನೀಡುವುದರಲ್ಲೇ ತೃಪ್ತರಾಗದೆ ಭಾರತೀಯ ಕಂಪೆನಿಗಳ ಇಕ್ವಿಟ್ಟಿಶೇರುಗಳನ್ನು ಭಾರೀ ಪ್ರಮಾಣದಲ್ಲಿ ಕೊಳ್ಳಲು ಮುಂದೆ ಬಂದಿವೆ ಎಂದಿರುವ ರಾಯಭಾರಿ ಡೀನ್ ಇಲೆಕ್ಟ್ರಾನಿಕ್ಸ್ ಕಂಪ್ಯೂಟರ್‌ಗಳು, ಸೂಕ್ಷ್ಮಯಂತ್ರಗಳು ಮುಂತಾದ ಉಚ್ಛ ತಂತ್ರಜ್ಞಾನದ ಕ್ಷೇತ್ರಗಳಲ್ಲಿ ಸಹಯೋಗ ಒಪ್ಪಂದಗಳನ್ನು ಮಾಡಿಕೊಂಡಿರುವ ಭಾರೀ ಅಮೆರಿಕನ್ ಕಂಪೆನಿಗಳ ಪಟ್ಟಿಯನ್ನೇ ನೀಡಿದ್ದಾರೆ.

ನೇವಿನ ಉದ್ದೇಶ

ಸಾಲದ ಹೊರೆ ಕೇಸರಲ್ಲಿ ಹೂತು ಹೋಗುತ್ತಿರುವಾಗ ಅಮೆರಿಕನ್ನರು ಭಾರತವನ್ನು ಮತ್ತಷ್ಟು ಸಾಲದ ಬಲೆಯೊಳಗೆ ಸೆಳೆಯಲು ಮುಂದೆ ಬಂದಿದ್ದಾರೆ. ಈ ಉದಾರ ನೆರವಿನ ಉದ್ದೇಶ ಏನು? ಡೀನ್ ತಮಗರಿವಿಲ್ಲದೆಯೇ ಅದನ್ನು ಬಹಿರಂಗಪಡಿಸಿದ್ದಾರೆ. "ಆರ್ಥಿಕತೆಯನ್ನು ಮಾರುಕಟ್ಟೆಯ ಶಕ್ತಿಗಳಿಗೆ ತುಡಿಯುವಂತೆ ಮಾಡುವ ಭಾರತ ಸರ್ಕಾರದ ಇತ್ತೀಚಿನ ಪ್ರಯತ್ನಗಳಿಗೆ ವಿಶ್ವಬ್ಯಾಂಕ್‌ನ ಬೆಂಬಲವನ್ನು ನಾವು ಪೂರ್ಣವಾಗಿ ಅನುಮೋದಿಸುತ್ತೇವೆ." ನಾವು ನೀಡಿದ ಸಾಲಕ್ಕೆ ಪ್ರತಿಯಾಗಿ ಆರ್ಥಿಕತೆಯನ್ನು ಇನ್ನಷ್ಟು ಉದಾರಗೊಳಿಸಿ ಕೈಗಾರಿಕೆಗಳಮೇಲಿನ ಹತೋಟಿಯನ್ನು ಬಿಟ್ಟುಬಿಡುವಂತೆ ಭಾರತ ಸರ್ಕಾರದ ಕೈತಿರುಚುವಲ್ಲಿ ವಿಶ್ವಬ್ಯಾಂಕ್‌ನೊಂದಿಗೆ ಪೂರ್ಣವಾಗಿ ನಾವಿದ್ದೇವೆ! ಇದೇ ಅವರ ಮಾತಿನ ನಿಜಾರ್ಥ.

ಅಮೆರಿಕನ್ನರು ರಾಜೀವರ ಉಚ್ಛ ತಂತ್ರಜ್ಞಾನದ ಮೋಹ ಪೂರ್ಣ ಪ್ರಯೋಜನ ಪಡೆದಿದ್ದಾರೆ. ಕಳೆದೆರಡು ವರ್ಷಗಳಲ್ಲಿ ತಂತ್ರಜ್ಞಾನದ ಖರೀದಿ ಮತ್ತು ವೈಜ್ಞಾನಿಕ ಸಂಶೋಧನಾ ಯೋಜನೆಗಳ ಬಗ್ಗೆ ಹಲವಾರು ಒಪ್ಪಂದಗಳು ನಡೆದಿವೆ. ಇಲೆಕ್ಟ್ರಾನಿಕ್ಸ್ ಕಂಪ್ಯೂಟರ್‌ಗಳು ಹಾಗೂ ಸಂಪರ್ಕ ಸಾಧನಗಳ ಖರೀದಿ 1986ರಲ್ಲಿ ಶೇಕಡಾ 47ರಷ್ಟು ಹೆಚ್ಚಿತು ಎಂದಿದ್ದಾರೆ ಡೀನ್. ಕೃಷಿ ಸಂಶೋಧನೆಯೊಂದರಲ್ಲೇ ಈಗ 61 ಪ್ರಾಜೆಕ್ಟ್‌ಗಳಿವೆ. ಇತ್ತೀಚೆಗೆ ಸಿ.ಪಿ.ಐ.(ಎಂ) ಮತ್ತು ಇತರ ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳು ಬಲವಾಗಿ ಖಂಡಿಸಿರುವ ಭಾರತ-ಅಮೆರಿಕಾ ಲಸಿಕೆ ಕಾರ್ಯಾಚರಣೆ ಕೂಡಾ ಇದೇ ಕ್ಷೇತ್ರದ್ದು.

"ತಂತ್ರಜ್ಞಾನ ವರ್ಗಾವಣೆ" ಪ್ರಕಾರ ಕ್ರೇ.XMP-14 ಸೂಪರ್ ಕಂಪ್ಯೂಟರ್ ನೀಡಲುಒಪ್ಪಿರುವುದನ್ನು ಹೇಳಿಕೊಂಡಿರುವ ರಾಯಭಾರಿ ಡೀನ್ ಭಾರತ ನಿಜವಾಗಿ ಬಯಸಿದ್ದ ಇನ್ನೂ ಮುಂದುವರಿದ XMP-24 ಕಂಪ್ಯೂಟರ್‌ನ್ನು ಕೊಡಲು ಅಮೆರಿಕಾ ನಿರಾಕರಿಸಿತು ಎಂಬುದನ್ನು ಮಾತ್ರ ಮರೆಮಾಚಿದ್ದಾರೆ ಅಲ್ಲದ ಈ ಒಪ್ಪಂದದಲ್ಲಿ ಅಡಕವಾಗಿರುವ ಶರತ್ತುಗಳೇನೆಂದು ಡೀನರಾಗಲೀ, ಭಾರತ ಸರ್ಕಾರವಾಗಲೀ ತಿಳಿಸುತ್ತಿಲ್ಲ.

ವಿನಾಶಕಾರೀ ಸಹಯೋಗ

ಅಮೆರಿಕಾವನ್ನು ದೇಶದ ರಕ್ಷಣಾ ಸಂಶೋಧನೆ ಹಾಗೂ ಉತ್ಪಾದನೆಯಲ್ಲಿ ಒಳಗೊಳ್ಳುವ ರಾಜೀವ ಸರ್ಕಾರದ ಹೊಸ ಪ್ರಯತ್ನವನ್ನು ಎಲ್ಲರಿಗಿಂತ ಮೊದಲು ಜುಲೈ 1986ರಲ್ಲೇ ಖಂಡಿಸಿದವರೆಂದರೆ ಸಿ.ಪಿ.ಐ.(ಎಂ)ನ ಕೇಂದ್ರ ಸಮಿತಿ. ಆದರೆ ಭಾರತ ಸರ್ಕಾರ ಮುಚ್ಚುಮರೆಯ ಮಾತುಕತೆಗಳ ಮೂಲಕ ಅದೇ ದಾರಿಯಲ್ಲಿ ಮುಂದುವರೆದು ಹಲವಾರು ಒಪ್ಪಂದಗಳನ್ನು ಮಾಡಿಕೊಂಡಿರುವ ಕಥೆಯನ್ನು ರಾಯಭಾರಿ ಡೀನ್‌ರವರ ಭಾಷಣ ಅತ್ಯಂತ ಸ್ಪಷ್ಟವಾಗಿ ನಮ್ಮ ಮುಂದಿಟ್ಟಿದೆ. ಹಗುರ ಯುದ್ಧ ವಿಮಾನಕ್ಕೆ ಎಫ್-18 ಹಾರ್ನೆಟ್ ಇಂಜಿನ್, ವಿಮಾನ ತಯಾರಿಕೆಗಾಗಿ ಐ.ಬಿ.ಎಂ. 3090 ಕಂಪ್ಯೂಟರ್, ವಿಶೇಷ ರಾಡಾರ್‌ಗಳು-ಇವು ಅಮೆರಿಕನ್ ಬಿಡಿ ಭಾಗಗಳನ್ನು ಹೊಂದಿರುವ ಉತ್ಪಾದನೆಗಳಲ್ಲಿ ಕೆಲವಷ್ಟೆ. ಸಹಜವಾಗಿಯೇ ರಾಯಭಾರಿ ಡೀನ್ ಈ ಬಗ್ಗೆ ಆನಂದ ಪರವಶರಾಗಿ ಮಾತನಾಡಿದ್ದಾರೆ. ಯಾಕೆಂದರೆ ಅರವತ್ತರ ದಶಕದ ನಂತರ [ಭಾರತ-ಚೀಣಾ ಗಡಿ ಯುದ್ಧದ ನಂತರ] ಈ ರೀತಿಯ ಸಹಯೋಗ ಮೊದಲ ಬಾರಿಗೆ ನಡೆಯುತ್ತಿದೆ! ಭಾರತದ ರಕ್ಷಣಾ ಸಂಸ್ಥೆಗಳ ಬಾಗಿಲನ್ನು ಅಮೆರಿಕಾಕ್ಕೆ ತೆರೆದಿಟ್ಟ ಈ ಬಗೆಗಿಂತ ಹೆಚ್ಚಿನ ಖಂಡನಾರ್ಹ ಸಂಗತಿ ಬೇರೆಯಿದೆಯೇ? ಪಾಕಿಸ್ತಾನವನ್ನು ಶಸ್ತ್ರಾಸ್ತ್ರ ಸಜ್ಜಿತಗೊಳಿಸಿ, ಅದರ ಮೂಲಕ ಪ್ರತ್ಯೇಕತಾವಾದಕ್ಕೆ, ಕುಮ್ಮಕ್ಕು ನೀಡುತ್ತಿರುವ, ಪಾಕಿಸ್ತಾನದ ಪರಮಾಣು ಶಸ್ತ್ರ ತಯಾರಿಕೆಯ ಕಾರ್ಯಕ್ರಮಕ್ಕೆ ಪರೋಕ್ಷ ಬೆಂಬಲ ನೀಡುವ ನೀತಿಯನ್ನು ರೇಗನ್ ಆಡಳಿತ ಹಠ ಹಿಡಿದು ಮುಂದುವರಿಸಿಕೊಂಡು ಬರುತ್ತಿರುವ ಹಿನ್ನೆಲೆಯಲ್ಲಿ ರಾಜೀವ್ ಸರ್ಕಾರ ಈ ಕ್ರಿಮಿನಲ್ ಕೃತ್ಯ ಎಸಗಿದೆ. ಭಾರತ-ಅಮೆರಿಕಾ ಸಂಬಂಧಗಳಲ್ಲಿ ರಾಜೀವಗಾಂಧಿ ಇಟ್ಟಿರುವ ಈ ಅತ್ಯಂತ ಅಪಾಯಕಾರೀ ಹೆಜ್ಜೆಯನ್ನು ತಡೆಯದಿದ್ದರೆ ದೇಶ ಗಂಭೀರ ಸಂಕಷ್ಟದಲ್ಲಿ ಸಿಲುಕಿಕೊಳ್ಳುತ್ತದೆ.

ತೋಳದೊಂದಿಗೇ ಸಹಯೋಗ

ಇದು ಸಾಲದೆಂಬಂತೆ ಭಯೋತ್ಪಾದಕತೆ ಎದುರಿಸುವಲ್ಲಿ ಸಹಯೋಗ ಬೇರೆ! ಒಂದೆಡೆ ಅಮೆರಿಕನ್ ಆಡಳಿತ ಮತ್ತು ಸಿ.ಐ.ಎ.ಗೆ ಭಯೋತ್ಪಾದಕ-ಪ್ರತ್ಯೇಕತಾವಾದೀ ಚಟುವಟಿಕೆಗಳಿಗೆ ಪ್ರೋತ್ಸಾಹ, ಧನ ಬೆಂಬಲ ನೀಡಲು ಪೂರ್ಣ ಅವಕಾಶ, ಇನ್ನೊಂದೆಡೆ ಅವೇ ಚಟುವಟಿಕೆಗಳನ್ನು ಎದುರಿಸಲು ಅದೇ ಆಡಳಿತ ಮತ್ತು ಸಿ.ಐ.ಎ.ನ ಮೊರೆ ಹೋಗುವುದು! ಭಾರತ ಸರ್ಕಾರದ ಕುರುಡು ಹಾಗೂ ಬೇಜವಾಬ್ದಾರಿ ನಿಲುವು ಇಲ್ಲಿ ಪೂರ್ಣವಾಗಿ ಬಯಲಾಗಿದೆ.

ಆಂತರಿಕವಾಗಿ, ರಾಷ್ಟ್ರೀಯ ಐಕ್ಯತೆಯ ರಕ್ಷಣೆಯಲ್ಲಿ ವಿಫಲತೆಯಿಂದ ಹಿಡಿದು ಭ್ರಷ್ಟಾಚಾರದವರೆಗೆ ಹಲವಾರು ಅಪರಾಧಗಳ ಬಗ್ಗೆ ಖಂಡನೆಗೊಳಗಾಗಿರುವ ರಾಜೀವ್ ಸರ್ಕಾರ ಈಗ ಆ ಅಪರಾಧಗಳ ಪಟ್ಟಿಗೆ ದೇಶದ ರಕ್ಷಣೆ ಮತ್ತು ಭದ್ರತೆಯನ್ನು ಸಾಮ್ರಾಜ್ಯಶಾಹೀ ಏಜೆನ್ಸಿಗಳಿಗೆ ತೆರೆದಿಟ್ಟು ದೇಶದ್ರೋಹ ಮಾಡಿರುವ ಆಪಾದನೆಯನ್ನು ಈ ಮೂಲಕ ಸೇರಿಸಿ ಕೊಂಡಂತಾಗಿದೆ.

ಈ ರೀತಿ ಬೆಳೆಯುತ್ತಿರುವ ಭಾರತ-ಅಮೆರಿಕಾ ಸಂಬಂಧಗಳ ಹಲವಾರು ಆಯಾಮಗಳನ್ನು ತೋರಿಸಿ ಕೊಟ್ಟಿರುವ ರಾಯಭಾರಿ ಡೀನ್ ಕೂಡಾ ಈ ಸಂಬಂಧಗಳ ಪೂರ್ಣ ಪರಿಣಾಮಗಳನ್ನು ಹೊರಗೆಡಹಲು ಹಿಂಜರಿದಿದ್ದಾರೆ ಸ್ವಾಭಾವಿಕವಾಗಿಯೇ ಅವನ್ನು ಮುಸಕುಗೊಳಿಸಲು ಪ್ರಯತ್ನಿಸಿದ್ದಾರೆ. ಆಂರಿಕ ವ್ಯವಹಾರಗಳಲ್ಲಿ ಮೂಗು ತೂರಿಸುವುದು ಬುಡಮೇಲು ಕೃತ್ಯಗಳು ಮುಂತಾದವುಗಳ ದೂರಗಾಮೀ ಯೋಜನೆಗಳು ಅಮೆರಿಕಾದೊಂದಿಗೆ ಸಿಲುಕಿ ಕೊಂಡುದರ ಅನಿವಾರ್ಯ ಕರಾಳ ಫಲಗಳು. ರಾಯಭಾರಿ ಡೀನ್‌ರವರ ಭಾಷಣದಲ್ಲಿ ಈ ಅಂಶಗಳು ನಾಪತ್ತೆಯಾಗಿದ್ದರೂ ಇತ್ತೀಚಿನ ದಿನಗಳಲ್ಲಿ ಅಂತಹ ಕರಾಳ ಅಂಶಗಳ ಮುಬ್ಬು ನೋಟವೂ ಕಂಡುಬಂದಿದೆ. ಉದಾಹರಣೆಗೆ ಭಾರತೀಯ ನಾಗರಿಕ ಹಾಗೂ ರಕ್ಷಣಾ ಅಧಿಕಾರಿಗಳ "ತರಬೇತುಗಾರರ ತರಬೇತಿ"ನಲ್ಲಿ ಅಮೆರಿಕಾದ ಕೈವಾಡ. ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ತರಬೇತಿ ಪಡೆದ ಸಿಬ್ಬಂದಿ ಮಂತ್ರಿ ಚಿದಂಬರಂ ಈಗಾಗಲೇ ಈ ತರಬೇತುಗಾರರನ್ನು ಅಮೆರಿಕನ್ ಪರಿಣತಿಯಿಂದ ಸಜ್ಜುಗೊಳಿಸುವ ಯೋಜನೆಯನ್ನು ರೂಪಿಸಿದ್ದಾರೆ.

ಬುಡಮೇಲು ಆಯಾಮ

ಅಂದರೆ ಅಮೆರಿಕನ್ ತಂತ್ರಜ್ಞಾನ ಮತ್ತು ಸಂಪರ್ಕ ಸಾಧನಗಳನ್ನು ಖರೀದಿಸಿದರಷ್ಟೇ ಸಾಲದು. ಈ ಹೊಸ ವ್ಯವಸ್ಥೆಗಳೊಳಗಿನ ಮಾನವ ಅಂಶಗಳನ್ನು ಕೂಡಾ ಸೂಕ್ತವಾಗಿ ಅವಕ್ಕೆ ಸೈದ್ಧಾಂತಿಕವಾಗಿ ಹೊಂದಿಕೊಳ್ಳುವಂತೆ ಮಾಡಬೇಕು!

ಇಲ್ಲಿಯೇ ನಾವು ಭಾರತ-ಅಮೆರಿಕಾ ಸಂಬಂಧಗಳ ಬುಡಮೇಲು ಆಯಾಮವನ್ನು ಗಮನಿಸಬೇಕು. ಬಹುಶಃ ರಾಜೀವಗಾಂಧಿಯವರು ಕಳೆದ ತಿಂಗಳು ಪ್ರಕಟವಾಗಿ ವಾಶಿಂಗ್ಟನ್‌ನ ರಾಜಕೀಯ ವಲಯಗಳಲ್ಲಿ ಅಲ್ಲೋಲ ಕಲ್ಲೋಲ ಉಂಟು ಮಾಡಿರುವ "ವೀಲ್‌ನಿಂದ : ಸಿ. ಐ. ಎ. ಯ ಗುಪ್ತ ಯುದ್ಧಗಳು - 1981-87" ಎಂಬ ಪುಸ್ತಕವನ್ನು ಓದಲಿಕ್ಕಿಲ್ಲ. ನಿಕ್ಸನ್‌ರ ವಾಟರ್‌ಗೇಟ್ ಹಗರಣವನ್ನು ಬಯಲಿಗೆಳೆದ ಖ್ಯಾತಿಯ ಬಾಬ್‌ವುಡ್‌ವಾರ್ಡ್‌ರ ಈ ಪುಸ್ತಕ ಬಹಳ ದಕ್ಷತೆಯಿಂದ ಕಲೆಹಾಕಿದ. ಮಾಹಿತಿಗಳನ್ನು ಮಾಜೀ ಸಿ. ಐ. ಎ. ಮುಖ್ಯಸ್ಥ ವಿಲಿಯಂಕ್ಯಾಸೆಯವರೊಂದಿಗೆ 48 ಸಂದರ್ಶನಗಳನ್ನು ಆಧರಿಸಿಕೊಂಡಿದೆ. ವೀಲ್ ಎಂಬುದು ರೇಗನ್ ಆಡಳಿತ ಮತ್ತು ಸಿ.ಐ.ಎ. ನ ಕಾನೂನುಬಾಹಿರ ರಹಸ್ಯ ಕಾರ್ಯಾಚರಣೆಗಳ ಗುಪ್ತ ನಾಮ. ವುಡ್‌ವಾರ್ಡ್‌ರ್ ಈ ಪುಸ್ತಕದಲ್ಲಿ ರೇಗನ್ ಹಾಗೂ ಕ್ಯಾಸೆಯವರ ಅಡಿಯಲ್ಲಿ ಸಿ. ಐ. ಎ. ತೃತೀಯ ಜಗತ್ತಿನಲ್ಲಿ ನಡೆಸಿರುವ ರಹಸ್ಯ ಕಾರ್ಯಾಚರಣೆಗಳ ರಕ್ತ ಹೆಪ್ಪುಗಟ್ಟಿಸುವ ವಿವರಗಳನ್ನು ನೀಡಲಾಗಿದ. ನಿಕಾರಗುವಾದ ವಿರುದ್ಧ ಹಾಗೂ ಇರಾನ್‌ಗೇಟ್ ಹಗರಣದ ನೀಚ ಪಿತೂರಿಗಳನ್ನು ಮಾತ್ರವಲ್ಲ ಸಿ. ಐ. ಎ. ಹೇಗೆ ಹನ್ನೆರಡು ದೇಶಗಳ ಸರ್ಕಾರಿ ಮುಖ್ಯಸ್ಥರಿಗೆ ಹಣ ಸಹಾಯ ನೀಡುತ್ತಾ ಬಂದಿದೆ ಎಂಬುದನ್ನು ವಿವರಿಸಲಾಗಿದೆ. ಈ ಹನ್ನೆರಡು ಮಂದಿಯಲ್ಲಿ ಪಾಕಿಸ್ತಾನದ ಅಧ್ಯಕ್ಷ ಜಿಯಾ ಕೂಡಾ ಒಬ್ಬರು! ಗ್ರೈನಡಾದೊಳಗೆ ಅತಿಕ್ರಮಣವನ್ನು ಬೆಂಬಲಿಸಲು ಡೊಮಿನಿಕಾ ದೇಶದ ಪ್ರಧಾನ ಮಂತ್ರಿಗೆ 1 ಲಕ್ಷ ಡಾಲರ್ ನೀಡಲಾಗಿತ್ತಂತೆ. ಲೆಬನಾನ್‌ನ ಶಿಯಾಮುಖಂಡನೊಬ್ಬನ ಕೊಲೆಗಾಗಿ ಸೌದಿಯ ಪ್ರತಿಗಾಮಿ ದೊರೆ ಫಹದ್‌ನೊಂದಿಗೆ ಸೇರಿ ಸಿ. ಐ. ಎ. ಪಿತೂರಿ ನಡೆಸಿತು. ಅದರ ಪರಿಣಾಮವಾಗಿ ನಡೆದ ಕಾರ್‌ಬಾಂಬ್ ಸ್ಫೋಟದಲ್ಲಿ ಎಂಭತ್ತು ಅಮಾಯಕ ಮಂದಿ ಕೊಲ್ಲಲ್ಪಟ್ಟರು!

ದೇಶಪ್ರೇಮಿಗಳು ಜಾಗೃತರಾಗಬೇಕು

ವುಡ್‌ವಾರ್ಡ್‌ರ್ ಪುಸ್ತಕ ಭಾರತ ಸರ್ಕಾರದ ಉನ್ನತ ಸ್ಥಾನಗಳಲ್ಲೂ ಸಿ.ಐ.ಎ. ಏಜೆಂಟರಿದ್ದಾರೆಂಬುದನ್ನು ಬಯಲಿಗೆಳೆದಿದೆ. ಶ್ರೀಮತಿ ಗಾಂಧಿಯವರ ಬಳಿಯೇ ಒಬ್ಬ ಏಜೆಂಟನನ್ನು ಇಡಲಾಗಿತ್ತು. ಆಕೆಗೆ ಗೊತ್ತಾದಾಗ ಇದನ್ನು ಅಮೆರಿಕನ್ ಹಾಗೂ ಭಾರತೀಯ ಪಕ್ಷಗಳು ಸೇರಿ ಅವಸರವಸವಾಗಿ ಮುಚ್ಚಿ ಹಾಕಿದವು ಎಂದು ಪುಸ್ತಕದಲ್ಲಿ ಹೇಳಲಾಗಿವೆ.

ಇತ್ತೀಚೆಗೆ ಶ್ರೀಲಂಕಾ ವಿಷಯದ ಮಾತುಕತೆಗಳಲ್ಲಿ ಮಹತ್ವದ ಸ್ಥಾನದಲ್ಲಿದ್ದ ಒಬ್ಬ ಹಿರಿಯ 'ರಾ'(ಭಾರತದ ಗುಪ್ತಚರ ಸಂಘಟನೆ) ಅಧಿಕಾರಿ ಉನ್ನಿಕೃಷ್ಣನ್ ಸಿ. ಐ. ಎ. ಏಜೆಂಟ್ ಎಂದು ಗೊತ್ತಾಗಿ ಬಂಧಿಸಲಾಗಿತ್ತು. ಇದರ ಮೊದಲು ಲಾರ್ಕಿನ್, ಕುಮಾರ ನಾರಾಯಣ್ ವ್ಯವಹಾರಗಳಂತೂ ನಮಗೆ ಗೊತ್ತಿದೆ. ಉಚ್ಛ ರಾಜನೀತಿಜ್ಞರು ಹಾಗೂ ಅಧಿಕಾರಗಳ ಬ್ಲ್ಯಾಕ್‌ಮೇಲ್‌ನಿಂದ ಹಿಡಿದು ಪ್ರತಿಗಾಮೀ ಪಕ್ಷಗಳಿಗೆ ಧನಸಹಾಯ, ಸಾಮ್ರಾಜ್ಯಶಾಹಿ ಮತ್ತು ಪ್ರತಿಗಾಮಿ ಆಳರಸರ ವಿರುದ್ಧವಾಗಿರುವವರ ಕೊಲೆ ವರೆಗಿನ ಸಿ. ಐ. ಎ. ನ ಹೊಲಸು ತಂತ್ರಗಳ ಗಮನಾರ್ಹ ರುಜುವಾತು ಈ ಪುಸ್ತಕ.

ರಾಜೀವ್‌ಗಾಂಧಿಯವರನ್ನು ಅವರ ಈಗಿನ ದಾರಿಯಲ್ಲೇ ಮುಂದುವರಿಯಲು ಬಿಟ್ಟರೆ ಭಾರತ ಕೂಡಾ ಇದೇ ರಹಸ್ಯ ಕಾರ್ಯಾಚರಣೆ"ಗಳ ಪಿತೂರಿಗಳ ಮತ್ತು ಭ್ರಷ್ಟಾಚಾರದ ಜಾಲದೊಳಗೆ ಸಿಲುಕಿಕೊಳ್ಳುತ್ತದೆ.

ಭಾರತದ ಸ್ವಾತಂತ್ರ್ಯ ಮತ್ತು ಭದ್ರತೆಯನ್ನು ಅಪಾಯಕ್ಕೀಡು ಮಾಡುವ ಭಾರತ-ಅಮೆರಿಕಾ ಸಂಬಂಧಗಳ ಇತ್ತೀಚಿನ ಬೆಳವಣಿಗೆಗಳನ್ನು ಸಿ.ಪಿ.ಐ.(ಎಂ)ನ ಪಾಲಿಟ್‌ಬ್ಯೂರೋ ತನ್ನ ಅಕ್ಟೋಬರ್ ಸಭೆಯಲ್ಲಿ ಬಲ

(6ನೇ ಪುಟ ನೋಡಿ)

ರಾಜ್ಯಾದ್ಯಂತ ರೈತ ಸಂಘದ ಗ್ರಾಮ ಘಟಕಗಳ ರಚನೆ

ಅಖಿಲ ಭಾರತ ಕಿಸಾನ್ ಸಭಾ ಸೆಪ್ಟೆಂಬರ್ 7ರಿಂದ 13ರ ವರೆವಿಗೂ 12 ಬೇಡಿಕೆ ಒತ್ತಾಯಿಸಿ ರಾಷ್ಟ್ರವ್ಯಾಪಿ ನಡೆಸಿದ ಪಿಕೆಟಿಂಗ್ ಚಳುವಳಿಯಲ್ಲಿ ಸಹಸ್ರಾರು ರೈತರು ಪಾಲ್ಗೊಳುವಂತೆ ಮಾಡಿದ ಕರ್ನಾಟಕ ಪ್ರಾಂತ ರೈತ ಸಂಘ ತನಗೆ ದೊರೆತ ವ್ಯಾಪಕ ಪ್ರಚಾರ ಪ್ರಕ್ಷೋಭೆಯ ನಂತರ ಗ್ರಾಮ ಘಟಕ ರಚನೆ ಕಾರ್ಯ ಕೈಗೊಂಡು ಅತ್ಯಂತ ಉತ್ಸಾಹದಾಯಕವಾಗಿ ಕಾರ್ಯ ಪ್ರವೃತ್ತಗೊಂಡಿದೆ. ಘಟಕ ರಚನೆ ಕುರಿತು ಬಂದ ವರದಿಯನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.

ಬಿಜಾಪುರಜಿಲ್ಲೆ

ಸಿಂದಗಿ:

ತಾಲ್ಲೋಕಿನ ಹಂಚಲಿ ಗ್ರಾಮದಲ್ಲಿ ಅಕ್ಟೋಬರ್ 12 ರಂದು ಜಿಲ್ಲಾ ಅಧ್ಯಕ್ಷ ರಾಜ್ಯ ಉಪಾಧ್ಯಕ್ಷ ಕಾ.ಭೀಮಸಿಕಲಾದಗಿ ಯವರ ಉದ್ಘಾಟನೆಯೊಂದಿಗೆ ಜರುಗಿತು. ರೈತರ ಸಮಸ್ಯೆಗಳು ಬಗೆಹರಿಯಲು ರೈತ ಸಂಘವನ್ನು ಕಟ್ಟಿ ಬೆಳೆಸಲು ಕರೆ ನೀಡಿದರು. ಎಸ್.ಎಫ್.ಐ.ನ ಕಾ.ಹಂದ್ರಾಳ ಪಾಟೀಲ ಹಾಗೂ ಡಿ.ವೈ.ಎಫ್.ಐ.ನ ಕಾ.ಅಣ್ಣಾರಾಯ ಇಳಗೇರ ಮುನ್ನುಸಾಬ ಮಾತನಾಡಿದರು. ನೂತನಘಟಕಕ್ಕೆಕಾ.ಹನುಮಂತರಾಯ ದೊಡ್ಡಮನಿ(ಅಧ್ಯಕ್ಷ)ಮೋದಿನಸಾಬ,ನದಾಪ, ಈಶ್ವರಪ್ಪಾ ಪತ್ತಾರ [ಉಪಾಧ್ಯಕ್ಷರು] ಬಸವನಪ್ಪ ಪಾಟೀಲ [ಪ್ರ.ಕಾರ್ಯದರ್ಶಿ] ವಿಶ್ವನಾಥ ಸೊನ್ನದ ಶಿವಪ್ಪಾಕುಂಬಾರ (ಸ.ಕಾರ್ಯದರ್ಶಿಗಳು) ಗ್ರಾಮದ ಸಮಸ್ಯೆಗಳಾದ ಕುಡಿಯುವ ನೀರು, ಶಾಲೆ ರಿಪೇರಿ, ಬಸ್ಸಿನ ನಿಲುಗಡೆ,ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗ ಮುಂತಾದ ಬೇಡಿಕೆ ಕುರಿತು ನಿರ್ಣಯ ಕೈಗೊಳ್ಳಲಾಯಿತು.

ಉಕಮನಾಳ

ಅಕ್ಟೋಬರ್ 8 ರಂದು ಬಿಜಾಪುರ ತಾಲ್ಲೋಕಿನ ಉಕಮನಾಳಗ್ರಾಮದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಘಟಕವನ್ನು ರಚಿಸಲಾಯಿತು. ಕಾ. ಭೀಮಸಿಕಲಾದಗಿ, ಮನ್ನುಸಾಬಕಲಾದಗಿ ಅಣ್ಣಾರಾಯ ಈಳಗೇರ, ಸದಾನಂದಮೋದಿ ರೈತರನ್ನುದ್ದೇಶಿಸಿ ಮಾತನಾಡಿದರು. ಮಂಡಲ ಪಂಚಾಯಿತಿ ಸದಸ್ಯ ಪುಭಾವ ಕಳಕೇರಿ ಹಾಗೂ ಊರಿನ ಗಣ್ಯರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಕಾ.ಸದಾಶಿವ ಮುದ್ನೂರ ಅಧ್ಯಕ್ಷತೆ ವಹಿಸಿದ್ದರು. ನೂತನ ಘಟಕಕ್ಕೆ ಎಂ.ಬಿ.ಚಂಚಿಗಿ [ಅಧ್ಯಕ್ಷ] ಲಕ್ಷ್ಮಣಇಂಡಿ, ರಾಜೇಂದ್ರ ಮುದ್ನೂರ(ಉಪಾಧ್ಯಕ್ಷರು)ಕುಲಕರ್ಣಿ (ಪ್ರ.ಕಾರ್ಯದರ್ಶಿ) ಜಿ.ಎಸ್.ಇಂಡಿ, (ಸಹ ಕಾರ್ಯದರ್ಶಿ) ದ್ಯಾಮನಗೌಡ ಬಿರಾದಾರ ಖಜಾಂಚಿಯಾಗಿ ಆಯ್ಕೆಗೊಂಡರು.

ದ.ಕ.ಜಿಲ್ಲೆ

ಕುಂದಾಪುರ ತಾಲ್ಲೋಕು ಗಿಳಿಯೂರು ಮತ್ತು ಮಣೂರು ಪ್ರದೇಶದ ರೈತ ಕೃಷಿ ಕೂಲಿಗಾರರ ಸಭೆ ಸೆ.27 ರಂದು ರೈತ ಸಂಘದ ಅಧ್ಯಕ್ಷ ಕಾ.ಶಿವರಾಮ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯದರ್ಶಿ ಕಾ.ದಾಸಭಂಡಾರಿಯವರು ರೈತರ ಬೇಡಿಕೆಗಳ ಕುರಿತು ವಿವರಿಸಿದರು. ನೂತನ ಸಮಿತಿಗೆ ಭೋಜಪೂಜಾರಿ(ಅಧ್ಯಕ್ಷ) ವೆಂಕಟೇಶ [ಉಪಾಧ್ಯಕ್ಷ] ಶಂಕರಪೂಜಾರಿ (ಕಾರ್ಯದರ್ಶಿ) ತಮ್ಮಯ್ಯ [ಸಹ ಕಾರ್ಯದರ್ಶಿ] ಹಾಗೂ 10 ಮಂದಿಯ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಬಸ್ರೂರು

ಕುಂದಾಪುರ ತಾಲ್ಲೋಕಿನ ಬಸ್ರೂರು ಗ್ರಾಮದ ಮಾರ್ಗೋಳಿ ಮೆರ್ಡಿ, ಹಾಗೂ ಕೊಳ್ಕೇರಿ ಪ್ರದೇಶದ ರೈತರ ಸಭೆ ಬಸ್ರೂರು ಸಮಾಜ ಮಂದಿರದಲ್ಲಿ ಕಾ.ಶಂಕರಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ದಾಸ್‌ಭಂಡಾರಿ,ಕಾ.ಬಿ.ಬಾಸ್ಕರ್‌ಶೆಟ್ಟಿಯವರು ರೈತರನ್ನುದ್ದೇಶಿಸಿ ಮಾತನಾಡಿದರು. ನೂತನ ಸಮಿತಿಗೆ ಕಾ.ಶಂಕರಶೆಟ್ಟಿ (ಅಧ್ಯಕ್ಷ) ಬಾಬುಪೂಜಾರಿ, ಗೋವಿಂದಪೂಜಾರಿ(ಉಪಾಧ್ಯಕ್ಷರು) ಸಂಜೀವ ಪೂಜಾರಿ(ಕಾರ್ಯದರ್ಶಿ) ಮಾಲಿಂಗ ದೇವಡಿಗ ಮಹಾಲಿಂಗಪೂಜಾರಿ[ಜೊತೆ ಕಾರ್ಯದರ್ಶಿ]ಯವರನ್ನು ಒಳಗೊಂಡ 18 ಮಂದಿಯ ಸಮಿತಿಯನ್ನು ರಚಿಸಲಾಯಿತು.

ಸೌದತ್ತಿ

ತಾಲ್ಲೋಕಿನ ಸೋಮಾಪುರ ರೈತರ ಸಭೆ ದೇವಪ್ಪಯಲ್ಲಪ್ಪನಾಯ್ಕರ ಅಧ್ಯಕ್ಷತೆಯಲ್ಲಿ ಜರುಗಿತು. ರೈತ ಸಂಘದ ಕಾ ಜಿ.ಬಿ.ತೋರಗಲ್ಲ ಮಾತನಾಡಿ ಗ್ರಾಮದ ಅಗತ್ಯ ಸೌಕರ್ಯದ ಬಗ್ಗೆ ರೈತರು ಹೋರಾಟ ನಡೆಸಲು ಕರೆ ನೀಡಿದರು. 50 ವರ್ಷದ ರೈತ ಸಂಘದ ಇತಿಹಾಸವನ್ನು ಪರಿಚಯ ಮಾಡಿಕೊಟ್ಟರು. ನೂತನ ಘಟಕಕ್ಕೆ ಮಹಾದೇವಪ್ಪ ಸಿಂಗಪ್ಪನಾಯ್ಕರ (ಅಧ್ಯಕ್ಷ) ಬಸಪ್ಪ ಚೆನ್ನಪ್ಪಯರಗೇಡ (ಉಪಾಧ್ಯಕ್ಷರು] ಸೋಮಪ್ಪದೇವಪ್ಪ,ಗೋರಬಾಳ[ಕಾರ್ಯದರ್ಶಿ] ಯವರನ್ನೊಳಗೊಂಡ ಸಮಿತಿಯು ಆಯ್ಕೆಗೊಂಡಿದೆ.

ಹುಣಸೂರು

ಮೈಸೂರು ಜಿಲ್ಲೆ ಹುಣಸೂರು ಹೆಗಡದೇವನಕೋಟೆ ತಾಲ್ಲೋಕಿನಲ್ಲಿ 1960 ರಿಂದಲೂ ರೈತ ಸಂಘದಲ್ಲಿ ದುಡಿದ ಕಾ.ಚಿನ್ನಸ್ವಾಮಿಯವರು ಸೆಪ್ಟಂಬರ್ 6 ರಂದು ನಿಧನರಾದರು. ರೈತ ಸಂಘದ ಕಾರ್ಯಕರ್ತರು ಸಭೆ ಸೇರಿ ಅಗಲಿದ ಸಂಗಾತಿಗೆ ಶ್ರದ್ಧಾಂಜಲಿ ಅರ್ಪಿಸಿ ರೈತ ಸಂಘದ ಬೆಳವಣಿಗೆಗಾಗಿ ಕಾ.ಚಿನ್ನಸ್ವಾಮಿಯವಹಂತೆ ತಾವು ದುಡಿಯುವ ದೃಢ ಪ್ರತಿಜ್ಞೆ ಮಾಡಿದರು.

ದೇವದುರ್ಗ

ತಾಲ್ಲೋಕಿನ ಗಲಿಗ ಗ್ರಾಮದಲ್ಲಿ ಅಕ್ಟೋಬರ್ 5 ರಂದು ಸುಮಾರು 800ಕ್ಕೂ ಹೆಚ್ಚು ಕೃಷಿಕೂಲಿಗಾರರು ರೈತರು ಹಲಿಗೆ, ಡೊಳ್ಳುಬ್ಯಾಂಡ್, ಬಾಜಾಗಳಿಂದ ಉತ್ಸಾಹಭರಿತ ಮೆರವಣಿಗೆ ನಡೆಸಿದರು. ಬೀದಿಯ ಬದಿ ಸಹಸ್ರಾರು ನಾಗರೀಕರು ನಿಂತು ವೀಕ್ಷಿಸಿದರು. ರೈತ ಸಂಘದ ಅಧ್ಯಕ್ಷ ಕಾ. ಚಂದ್ರಶೇಖರಬಾಳೆಯವರು ರಿಬ್ಬನ್ ಕತ್ತರಿಸುವ ಮೂಲಕ ಗಲಿಗೆ ಮಂಡಳ ಪಂಚಾಯಿತಿ ಮಟ್ಟದ ರೈತ ಸಂಘದ ಕಛೇರಿಯನ್ನು ಉದ್ಘಾಟಿಸಿದರು. ತಾಲ್ಲೋಕು ಸಮಿತಿಕಾರ್ಯದರ್ಶಿ ಸಭೆ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಮಾತನಾಡಿದ ಕಾ.ಬಾಳೆಯವರು ಅಖಿಲ ಭಾರತ ಕಿಸಾನ್ ಸಭಾ ಧ್ಯೇಯ ಧೋರಣೆ, ರಾಜಕೀಯ ಪರಿಸ್ಥಿತಿ ಕುರಿತು ವಿವರಿಸಿದರು. ಕಾ.ಜಿ. ಬಸವರಾಜು ವಂದನಾರ್ಪಣೆಮಾಡಿದರು

ಗುಲ್ಬರ್ಗ

ತಾಲ್ಲೋಕಿನ ಮುಕರಂಬಾ ಗ್ರಾಮದಲ್ಲಿ ಅಕ್ಟೋಬರ್ 9 ರಂದು ನಡೆದ ರೈತರ ಸಭೆಯಲ್ಲಿ ಗ್ರಾಮ ಘಟಕ ರಚಿಸಲಾಯಿತು. ರೈತ ಸಂಘದ ಕಾರ್ಯದರ್ಶಿ ಕಾ.ಕಲ್ಲಪ್ಪ ಕಿರಣಗಿ ಉದ್ಘಾಟಿಸಿದರು. ಜಿಲ್ಲಾ ಅಧ್ಯಕ್ಷ ಕಾ. ಅರುಣಕುಮಾರ್ ಮನೋಹರ, ಅಣಕಲ್, ಮಂಡಲ ಪ್ರಧಾನರಾದ ಮಹಾದೇವಪ್ಪ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಬಡ ರೈತರು ಉಳುಮೆ ಮಾಡಿದ ಸೈರಾಣ ಜಮೀನುಗಳಿಗೆ ಪಟ್ಟ ದೊರಕಿಸಿಕೊಳ್ಳಲು, ಬೆಳೆದ ಬೆಳೆಗೆನ್ಯಾಯಬೆಲೆ ದೊರಕಿಸಿಕೊಳ್ಳಲು ರೈತರು ಒಟ್ಟಾಗಿ ಹೋರಾಟ ನಡೆಸಲು ಕರೆ ನೀಡಿದರು. ನೂತನ ಘಟಕಕ್ಕೆ ಕಾ.ಶಿವಪ್ಪಾಕೊಡ್ಲಾ(ಅಧ್ಯಕ್ಷ) ರಾಮಣ್ಣಾಮಳಬೇಡ(ಉಪಾಧ್ಯಕ್ಷ) ಗುಂಡಪ್ಪಾಚಿಂಗಟ್ಟೆ [ಪ್ರಧಾನ ಕಾರ್ಯದರ್ಶಿ] ಬಸವರಾಜಗೋಗಿ [ಕಾರ್ಯದರ್ಶಿ) ಮನೋಹರ್‌ಗೋಗಿ, ಸಿದ್ರಾಮಪ್ಪಾಮತಾಳ(ನಿರ್ದೇಶಕರು) ಸಿದ್ಧಾರೊಡಬಮ್ಮಣಿ ಕೋಶಾಧಿಕಾರಿಯಾಗಿರುವ 22 ಜನರ ಸಮಿತಿಯನ್ನು ರಚಿಸಲಾಯಿತು. ●

ಜೆ. ಎನ್. ಯು.ನಲ್ಲಿ ಎಸ್. ಎಫ್. ಐ. ಗೆ ವಿಜಯ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ.) ಮತ್ತು ಅಖಿಲ ಭಾರತ ವಿದ್ಯಾರ್ಥಿ ಫೆಡರೇಷನ್[ಎ.ಐ.ಎಸ್.ಎಫ್.] ಚುನಾವಣೆ ಹೊಂದಾಣಿಕೆ ಮಾಡಿಕೊಂಡು ಅಕ್ಟೋಬರ್ 19 ರಂದು ನಡೆದ ದೆಹಲಿಯ ಜವಹರಲಾಲ್ ನೆಹರು ವಿ. ವಿ. ಚುನಾವಣೆಯ ಸ್ಟೂಡೆಂಟ್ಸ್ ಕೌನ್ಸಲ್‌ನಲ್ಲಿ 25 ಸ್ಥಾನಗಳ ಪೈಕಿ 12 ಸ್ಥಾನಗಳನ್ನು ಗೆದ್ದುಕೊಂಡಿದೆ. ಗೆದ್ದಿರುವ ಎಲ್ಲಾ ಪದಾಧಿಕಾರಿಗಳು ಬಾರಿ ಬಹುಮತಗಳಿಂದ ಜಯಗಳಿಸಿದ್ದಾರೆ. ಎದುರಾಳಿಗಳಾಗಿ ಸ್ಪರ್ಧಿಸಿದ ಫ್ರೀ ಥಿಂಕರ್ಸ್ಸ್ ಸಮತಾ ಯುವಜನ್ ಸಭಾ, ಎನ್.ಎಸ್.ಯು.ಐ. ಮತ್ತು ಇತರ ಕೆಲವು ಗುಂಪುಗಳ ಕೂಟವನ್ನು ಸೋಲಿಸಿದ್ದಾರೆ.

ಅಧ್ಯಕ್ಷರಾಗಿ ಪೀತಾಂಬರ್‌ರಾವ್ ಸರ್‌ಸಾನಿ ಉಪಾಧ್ಯಕ್ಷರಾಗಿ ಸುರ್ಜಿತ್ ಮಜುಮ್‌ದಾರ್ ಮತ್ತು ಸಹ ಕಾರ್ಯದರ್ಶಿಯಾಗಿ ಅತುಲ್‌ಅನೇಜಾ ಇವರು ಎಸ್.ಎಫ್.ಐ. ನಿಂದ ಆಯ್ಕೆಯಾಗಿದ್ದಾರೆ. ಕೆ. ಇಲೊಂಗೋವನ್ ಎ.ಐ.ಎಸ್.ಎಫ್. ನಿಂದ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ.

ಈ ಚುನಾವಣೆಗೆಂದು ಎಸ್‌ಎಫ್‌ಐ ಬೆಂಗಳೂರು ನಗರ ಸಂಘಟನಾ ಸಮಿತಿಯು ವಿದ್ಯಾರ್ಥಿ – ಅಧ್ಯಾಪಕರಿಂದ, ಹಿತೈಷಿಗಳಿಂದ ಸಂಗ್ರಹವಾದ 200-ರೂ.ಗಳನ್ನು ಜೆ.ಎನ್.ಯು.ಚುನಾವಣೆಯ ನಿಧಿಗೆ ಕಳುಹಿಸಿಕೊಟ್ಟಿತ್ತು. ○

ದುಡಿಯುವ ಮಹಿಳೆಯರ ಸಭೆ

ದುಡಿಯುವ ಮಹಿಳೆಯರ ರಾಜ್ಯ ಸಮನ್ವಯ ಸಮಿತಿ ಆಶ್ರಯದಲ್ಲಿ ಅಕ್ಟೋಬರ್ 2 ರಂದು ಹಾಸನದಲ್ಲಿ 3 ರಂದು ಬೇಲೂರಿನಲ್ಲಿ, 4 ರಂದು ಚಿಕ್ಕಮಗಳೂರಿನ ಮಲೆನಾಡು ಪ್ರೌಢ ಶಾಲೆಯಲ್ಲಿ ನೂರಾರು ದುಡಿಯುವ ಮಹಿಳೆಯರು ಭಾಗವಹಿಸಿದ್ದ ಸಭೆಗಳ ನಡೆಸಲಾಗಿದೆ. ಈ ಸಭೆಯಲ್ಲಿ ರಾಜ್ಯ ಸಮಿತಿ ಮುಖಂಡರಾದ ಕಾ॥ ಎಂ.ಎಂ. ರಾಜಮ್ಮ, ಪದ್ಮಾವತಿ, ಮತ್ತು ಖುರ್ಷಿದಾಬೇಗಂ ರವರು ಭಾಗವಹಿಸಿ ಮಹಿಳೆಯರ ಸಮಸ್ಯೆಗಳು ಹಾಗೂ ಸಂಘಟನೆಯನ್ನು ಕಟ್ಟಿ ಬೆಳೆಸಲು ಕರೆ ನೀಡಿದರು. ಈ ಮೂರುಸ್ಥಳಗಳಲ್ಲಿಯೂ ದುಡಿಯುವ ಮಹಿಳೆಯರ ಸಂಘಟನಾ ಸಮಿತಿಗಳನ್ನು ರಚಿಸಲಾಗಿದೆ. ಈ ಸಭೆಯಲ್ಲಿ ಸ್ಥಳೀಯ ನಾಯಕರಾದ ಕಾ. ಸರೋಜ ಕಾ. ವಿ.ಸುಕುಮಾರ್ ಅನುಸೂಯಮ್ಮ, ಎ. ಕೆ. ವಿಶ್ವನಾಥ್, ಜಿ. ಎಸ್. ರಾಘವೇಂದ್ರ ರವರುಗಳು ಮಾತನಾಡಿದರು.

ರಾಷ್ಟ್ರೀಯ ಐಕ್ಯತಾ ದಿನಾಚರಣೆ

ಸಿ. ಐ. ಟಿ. ಯು. ಕರೆಯ ಮೇರೆಗೆ ಅ. 12 ರಂದು ಹಾಸನದಲ್ಲಿ ಕೋಮು ಸೌಹಾರ್ದತಾ ಮತ್ತು ರಾಷ್ಟ್ರೀಯಐಕ್ಯತೆಯ ದಿನಾಚರಣೆ ಆಚರಿಸಲಾಯಿತು. ವಿವಿಧ ಕಾಫಿ ಕ್ಯೂರಿಂಗ್ ಗೇಟಿನ ಮುಂಭಾಗದಲ್ಲಿ ನಡೆದ ಕಾರ್ಮಿಕರಸಭೆಯನ್ನುದ್ದೇಶಿಸಿ ಕಾ. ವಿ.ಸುಕುಮಾರ್, ಕೆ. ಟಿ. ರಾಘವೇಂದ್ರ ಕಾ. ಜಿ. ಐ. ಸತ್ಯನಾರಾಯಣ, ಸಿ. ಬೂಗೇಶ್, ಹಾಗೂ ಕುಮಾರ್ ಮಾತನಾಡಿದರು. ಕೋಮುವಾದದ ವಿರುದ್ಧ ದೇಶದ ಐಕ್ಯತೆಯ ಘೋಷಣೆಗಳನ್ನು ಕೂಗಲಾಯಿತು. ●

ಕೆನರಾ ವರ್ಕಶಾಪ್ ಮಹಾಸಭೆ

ಕೆನರಾ ವರ್ಕಶಾಪ್‌ನ ನೌಕರರ ಸಹಕಾರ ಸಂಘದ 28ನೇ ವಾರ್ಷಿಕ ಮಹಾ ಸಭೆ ಸೆ.26ರಂದು ಸಂಘದ ಗೌರವಅಧ್ಯಕ್ಷ ಶ್ರೀನಿವಾಸವಿ.ಕುಡ್ವಾರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯದರ್ಶಿ ಕೆ.ಸದಾನಂದ ವರದಿ ಮಂಡಿಸಿದರು. 1987-88ರ ಬಜೇಟಿಗೆ ಸಭೆ ಮಂಜೂರು ಮಾಡಿತು. ಶೇಕಡಾ ಒಂದರ ಬಡ್ಡಿ ದರದಲ್ಲಿ ಸಾಲ ಒದಗಿಸಲು ,ಉಪ ನಿಬಂಧನೆತಿದ್ದುಪಡಿಗೆ ಸಭೆ ಅನುಮತಿ ನೀಡಿತು. ಸಹಕಾರಿ ಸಂಘಗಳ ಬೆಳವಣಿಗೆ ಹಾಗೂ ಅವಶ್ಯಕತೆ ಬಗ್ಗೆ ಅಧ್ಯಕ್ಷ ಕುಡ್ವಾ ಮಾತನಾಡಿದರು. ಕಾರ್ಯದರ್ಶಿ ದನ್ಯವಾದವಿತ್ತರು. ●

ಗುಲ್ಬರ್ಗ ಜಿಲ್ಲಾ ಸಂಘಟನಾ ಸಮಿತಿ

ಸುರಪುರ, ಅಳಂದ, ಗುಲ್ಬಗರ್ಾ, ಜೇವರ್ಗಿ, ಶಾಹಬಾದ್ ಮುಂತಾದ ವಿವಿಧ ತಾಲ್ಲೋಕುಗಳಿಂದ ಬಂದು ಭಾಗವಹಿಸಿದ್ದ ಎಸ್. ಎಫ್. ಐ. ಕಾರ್ಯಕರ್ತರ ಸಭೆ ಅಕ್ಟೋಬರ್ 11 ರಂದು ಜರುಗಿತು.ರಾಜ್ಯ ಕಾರ್ಯದರ್ಶಿ ಕಾ. ಎಸ್. ಆರಾಧ್ಯ, ಉಪಾಧ್ಯಕ್ಷ ಕಾ. ಎಸ್. ವೈ. ಗುರುಶಾಂತ್ ಉಪಸ್ಥಿತರಿದ್ದರು.

ಜಿಲ್ಲಾ ಸಂಘಟನಾ ಸಮಿತಿ ಸಂಚಾಲಕರಾಗಿ ಕಾ. ನಿಂಗಣ್ಣ ಮೋರಟಗಿ, ಸಹಸಂಚಾಲಕರಾಗಿ ರಾಮಾಂಜನೇಯ ಚನ್ನಬಸವ ಮತ್ತು ಪ್ರಭಾಕರ ಹಾಗರಗಿ ಆಯ್ಕೆಗೊಂಡು 16 ಜನರ ಸಮಿತಿಯನ್ನು ಚುನಾಯಿಸಲಾಯಿತು. ನವಂಬರ್‌ನಲ್ಲಿ ಶಿಬಿರ ಡಿಸೆಂಬರ್‌ನಲ್ಲಿ ಜಿಲ್ಲಾ ಸಮ್ಮೇಳನ ನಡೆಸಲು ನಿರ್ಣಯಿಸಲಾಯಿತು. ●

ಭಾಷೆಯ ಬಗ್ಗೆ ಅಭಿಮಾನವೆಂಬುದು ಹೇಗಿರಬೇಕು ?

ಜಿ. ಎನ್. ನಾಗರಾಜ್

ಕರ್ನಾಟಕ ರಾಜ್ಯೋತ್ಸವದ ಸಂಭ್ರಮ, ಉತ್ಸವಗಳು ಆಗಲೇ ಆರಂಭವಾಗಿವೆ. ರಾಜ್ಯದ ಹಲವೆಡೆಗಳಲ್ಲಿ ವೇದಿಕೆಗಳ ಮೇಲಿನಿಂದ ಭಾಷೆಯ ಬಗ್ಗೆ ಗಡಿಯ ಬಗ್ಗೆ ಹಲವಾರು ಅಭಿಪ್ರಾಯಗಳು, ಜನರ ಮನಸ್ಸಿನ ಮೇಲೆ ಬಿಂಬಿತವಾಗಲಿವೆ. ತಿಂಗಳುದ್ದಕ್ಕೂ ನಡೆಯಲಿರುವ ಈ ಸಮಾರಂಭಗಳಲ್ಲಿ ನಿಜವಾಗಿಯೂ ಚಿಂತಿಸಬೇಕಾದುದೇನು? ಒಂದು ವಿಶ್ಲೇಷಣೆ.

ನಾವು ಆಡುವ ನುಡಿಯ ಬಗ್ಗೆ, ನಮ್ಮ ಜೊತೆಗೂಡಿ ಭಾಷೆಯನ್ನಾಡುವ ಜನರ ಬಗ್ಗೆ ಅಭಿಮಾನ ಪ್ರೀತಿ ಮಾನವ ಸಹಜ ಲಕ್ಷಣ. ನಮ್ಮ ಭಾವನೆಯನ್ನೆಲ್ಲಾ ಕೂಡಿಕೊಳ್ಳಬಹುದಾದ ಅರ್ಥಮಾಡಿಕೊಳ್ಳಬಹುದಾದ ಒಂದು ಜೀವಂತ ಮನಸ್ಸು ಉಳಿದೆಲ್ಲರಿಗಿಂತ ಹೆಚ್ಚು ಹತ್ತಿರವಾಗುವುದರಲ್ಲಿ ಆಶ್ಚರ್ಯವೇನಿದೆ ? ಕನ್ನಡನುಡಿ ಮನುಷ್ಯರ ಭಾವನೆಗಳನ್ನು ವ್ಯಕ್ತಪಡಿಸುವ ಸಮರ್ಥ ಭಾಷೆಯಾಗಿ ರೂಪುಗೊಂಡು ಸಾವಿರಾರು ವರ್ಷ ಕಳೆದ ನಂತರವೇ ಈ ಭಾಷೆ ಪ್ರೇಮ ದೃಢಗೊಂಡು ನಾವೆಲ್ಲರೂ ಒಂದೇ, ಪರಸ್ಪರ ಕಚ್ಚಾಡಬಾರದು,ಒಬ್ಬ ಕನ್ನಡದ ರಾಜ ಇನ್ನೊಬ್ಬ ಕನ್ನಡದ ರಾಜನ ವಶದಲ್ಲಿಯೇ ಇರುವ ಪ್ರದೇಶವನ್ನು ಕಿತ್ತುಕೊಳ್ಳಲು ಕನ್ನಡದ ವೀರರ ರಕ್ತದ ಕೋಡಿ ಹರಿಸಬಾರದು ಎಂಬ ಭಾವನೆ ಬೆಳೆಯಲು ಸಾಧ್ಯವಾಯಿತು. ಅದಕ್ಕೆ ಮೊದಲು ಅತ್ಯಂತ ಪ್ರಬಲನಾದ ಒಬ್ಬ ಕನ್ನಡದ ಸಾಮ್ರಾಟನನ್ನು ಸೋಲಿಸಲು ಕನ್ನಡದ ಮತ್ತೊಬ್ಬ ಸಾಮ್ರಾಟ ನೆರಿಯ ತಮಿಳ, ಮರಾಠ, ತೆಲುಗು ಸಾಮ್ರಾಟರ ದಳಪತಿಯಾಗಿ ಕನ್ನಡದ ಸಾಮ್ರಾಟರ ಮೇಲೆ ಯುದ್ಧ ಹೂಡಿದ ಎಷ್ಟು ಉದಾಹರಣೆಗಳಿಲ್ಲ. ಕನ್ನಡದ ನೆಲದಲ್ಲಿ ಮೊತ್ತ ಮೊದಲ ಸಾಮ್ರಾಜ್ಯವನ್ನು ಸ್ಥಾಪಿಸಿದ ಕದಂಬರ ಕಾಲದಿಂದ ಆರಂಭಿಸಿ ಮೈಸೂರು ಮಹಾರಾಜರ ಕಾಲದವರೆಗೂ ನೂರಾರು ಉದಾಹರಣೆಗಳನ್ನು ಕೊಡಬಹುದು.

ಅಷ್ಟೇ ಏಕೆ ? ಕೇವಲ ಕೆಲವೇ ದಶಕಗಳ ಹಿಂದ ಕನ್ನಡದ ನವೋದಯವನ್ನು ಸಾರಿದ ಮುಂಜಾವದ ಹಕ್ಕಿಧ್ವನಿಗಳಲ್ಲೊಬ್ಬರಾದ, ಆದರೆ ತಮಿಳು ಭಾಷೆಯವರಾದ ಮಾಸ್ತಿಯವರು ಕನ್ನಡಿಗರನ್ನುದ್ದೇಶಿಸಿ "ಅಣ್ಣಾ ನನ್ನೂರು ಧಾರವಾಡ, ನನ್ನೂರು ಮೈಸೂರು, ನನ್ನೂರು ಮಂಗ್ಳೂರು" ಎನ್ನದಿರಿ, ನಿಮ್ಮ ನಿಮ್ಮಲ್ಲೇ ಹೊಡೆದಾಡದಿರಿ ಎಂದು ಬುದ್ಧಿ ಹೇಳಲಿಲ್ಲವೇ.

(ಕ್ರಿಸ್ತಶಕದ ಆದಿಯಿಂದ ಹಿಡಿದು 1956ರವರೆಗೂ) ಭಾಷೆಯ ಬಗ್ಗೆ ಅಭಿಮಾನವೆಂಬುದು ಭಾಷೆಯನ್ನು ಉಪಯೋಗಿಸುವುದರಲ್ಲಿ ಸಂಸ್ಕೃತದ ತಲೆಮೆಟ್ಟಿ ಬೆಳೆಯುವುದರಲ್ಲಿ ವ್ಯಕ್ತವಾಗಿದ್ದರೂ ಅದಕ್ಕೊಂದು ರಾಜಕೀಯ ರೂಪು ಬಂದದ್ದು, ಒಂದು ಭಾಷೆಯವರು ಒಂದೇ ಆಡಳಿತದಲ್ಲಿರಬೇಕು ಎಂಬ ಅತ್ಯಂತ ಜನ ಪರವಾದ ಭಾವನೆ ಮೊಳೆತು ಬಂದದ್ದು 20 ನೇ ಶತಮಾನದ ಎರಡನೇ ಮೂರನೇ ದಶಕಗಳಲ್ಲಿ. (ಕೇವಲ 20ನೇಯ ಶತಮಾನದಲ್ಲಿಯೇ ಏಕೆ ಈ ಭಾವನೆ ಮೂಡಿ ಮೊಳೆಯಿತು ಎಂಬುದರ ವಿಶ್ಲೇಷಣೆಗಾಗಿ "ಐಕ್ಯರಂಗ"ದ 86ರ ರಾಜ್ಯೋತ್ಸವ ವಿಶೇಷಾಂಕದಲ್ಲಿ "ಕರ್ನಾಟಕ ಏಕೀಕರಣ ಚಳುವಳಿ —ಒಂದು ಸೈದ್ಧಾಂತಿಕ ವಿಶ್ಲೇಷಣೆ"ನೋಡಿ.]

ಕರ್ನಾಟಕ ಏಕೀಕರಣವಾಗಬೇಕು ಎಂಬ ಚಳುವಳಿಯ ಹಿನ್ನೆಲೆಯಲ್ಲಿದ್ದ ಕರ್ನಾಟಕದ ಬಂಡವಾಳಶಾಹಿ ಬೆಳವಣಿಗೆಯ ಹಾಗೂಗುಣ ದೌರ್ಬಲ್ಯಗಳನ್ನು ಹೊಂದುಕೊಂಡೇ ಈ ಚಳುವಳಿಯ ಗುಣ ದೌರ್ಬಲ್ಯಗಳನ್ನು ಅಳೆಯಬೇಕಾಗಿದೆ. ಒಂದು ಕಡೆ ಭಾಷಾವಾರು ಪ್ರಾಂತ್ಯಗಳನ್ನು ಮಾಡಿದರೆ ನಮ್ಮ ಹಿಡಿತ ಹೋಗುತ್ತದೆ.ಅದಕ್ಕೆ ಬದಲಾಗಿ ದಕ್ಷಿಣ ವಲಯ ಉತ್ತರ ವಲಯ ಎಂಬ ದಿಕ್ಕಿಗೊಂದು ಆಡಳಿತ ವಿಭಾಗ ಮಾಡಿಬಿಡಬೇಕು ಎಂಬ ಗುತ್ತೇದಾರಿ ಬಂಡವಾಳಶಾಹಿಗಳ ನೇತೃತ್ವದಲ್ಲಿನ ಆಳುವ ವರ್ಗದ ಚಿಂತೆ. ಮತ್ತೊಂದು ಕಡೆ ಕನ್ನಡ ಬಂಡವಾಳಶಾಹಿಗಳಿಂದ ಹಿಡಿದು ಕಾರ್ಮಿಕರ ವರ್ಗದವರೆಗೂ ಎಲ್ಲಾ ಜನರು ಸೇರಿದ ಕರ್ನಾಟಕ ಒಂದಾಗಬೇಕೆಂಬ ಹೋರಾಟ. ಈ ತುಯ್ದಾಟಗಳ ನಡುವೆ, ಅನೇಕ ರಾಜಕೀಯ ಪಟ್ಟಭದ್ರರ ಕೈವಾಡದ ನಡುವೆ ಕರ್ನಾಟಕ ಏಕೀಕರಣವಾಯಿತು.

1.11.56ರಂದು ಕರ್ನಾಟಕದ'ಏಕೀಕರಣವಾಯಿತು. ಕನ್ನಡ ಭಾಷೆಗೆ ಆಡಳಿತದಲ್ಲಿ ಶಿಕ್ಷಣದಲ್ಲಿ ಉನ್ನತ ಸ್ಥಾನ ಲಭಿಸುವುದೆಂದು, ಕನ್ನಡ ಸಾಹಿತ್ಯ, ಸಂಸ್ಕೃತಿಯ ಬೆಳವಣಿಗೆಗೆ ಅನುವಾಗುವುದೆಂದು, ಎಲ್ಲಕ್ಕೂ ಮಿಗಿಲಾಗಿ ಕರ್ನಾಟಕ ಅತ್ಯುನ್ನತ ಆರ್ಥಿಕ ಪ್ರಗತಿಯನ್ನು ಸಾಧಿಸಿ ಸರ್ವರಿಗೆಸಮಬಾಳು ಸರ್ವರಿಗೆ ಸಮಪಾಲು, ಲಭ್ಯವಾಗುವುದೆಂದು ಜನ ಸಾಮಾನ್ಯರು ಕನಸಿದ್ದರು

ಆದರೆ ನಮ್ಮ ಕೇಂದ್ರೀಕೃತ ಅಧಿಕಾರವನ್ನು ಪ್ರತಿಪಾದಿಸುವ ಸಂವಿಧಾನದ ಅಡಿಯಲ್ಲಿ ರಾಜ್ಯದ ಬದುಕು ಅರಳಲಿಲ್ಲ. ಕೇಂದ್ರ ಹಾಗೂ ರಾಜ್ಯಗಳಲ್ಲಿ ಆಡಳಿತಕ್ಕೆ ಬಂದ ಹಿರಿ ಬಂಡವಾಳಶಾಹಿ ನೇತೃತ್ವದ ಬಂಡವಾಳಶಾಹಿ ಭೂಮಾಲಕ ವರ್ಗಗಳು ಎಲ್ಲಾ ಭಾಷೆಗಳಿಗೂ ಸಮಾನ ಸ್ಥಾನಮಾನ ನೀಡುವ, ಜನರ ಭಾಷೆಯನ್ನು ಆಡಳಿತ ಭಾಷೆಯನ್ನಾಗಿ ಮಾಡುವ ತೀರ್ಮಾನ ಕೈಗೊಳ್ಳಲಿಲ್ಲ.

ಆದುದರಿಂದ ಕನ್ನಡವನ್ನು ಆಡಳಿತ ಭಾಷೆ, ಶಿಕ್ಷಣ ಮಾಧ್ಯಮ ಮಾಡಲು ಮತ್ತೆ ಹೋರಾಟ ಆರಂಭವಾಯಿತು. 'ಪಾರು ಮಾಡೆನ್ನನೀ ಇಂಗ್ಲೀಷಿನಿಂದ ಇಂಗ್ಲೀಷೆ ಎಂಬ ಬಂಡೆಯ ಕೆಳಗೆ ಸಾಯುತ್ತಿದೆ ಕನ್ನಡ ಭಾಷೆ ಎಂದು ಕನ್ನಡ ಕುವೆಂಪುರವರು ಜನ ಸಾಮಾನ್ಯರ ಆಶಯವನ್ನು ಪ್ರತಿಬಿಂಬಿಸಿದರು. ಆದರೆ ಕನ್ನಡ ಸಾಹಿತಿಗಳಲ್ಲಿ ಹಲವರು ಇಂಗ್ಲಿಷ್ ವಿದ್ಯಾಭ್ಯಾಸ ಅತ್ಯಗತ್ಯವೆಂದು ಪ್ರತಿಪಾದಿಸಿದರು. ಹೀಗೆ ಕನ್ನಡ ಸಾಹಿತಿಗಳೆಲ್ಲಿ ಎರಡು ಗುಂಪಾಗಿ ಇಂಗ್ಲಿಷ್ ಪರ ಕನ್ನಡ ಸಾಹಿತಿಗಳೊಡನೆ ಉಳಿದ ಬುದ್ಧಿ ಜೀವಿ ವೃಂದವು ಸೇರಿ ಇಂಗ್ಲಿಷ್ ಶಿಕ್ಷಣ ಮಾಧ್ಯಮದಿಂದಲೇ ಮೋಕ್ಷ ಎಂದು ವಾದಿಸಿದರೆ, ನಮ್ಮ ಸಂವಿಧಾನದಡಿ ಕೇಂದ್ರದ ಅಧಿಕಾರವನ್ನು ರಾಜ್ಯ ವಲಯದೊಳಗೂ ತೂರಿಸುವ ಹೊಣೆ ಹೊತ್ತ ಅಖಿಲ ಭಾರತ ಸೇವೆಗಳಾದ ಐ.ಎ.ಎಸ್, ಐ.ಪಿ.ಎಸ್, ಮೊದಲಾದ ಅಧಿಕಾರಶಾಹಿ ಕನ್ನಡಕ್ಕೆ ಆಡಳಿತ ಭಾಷೆಯಾಗುವ ಯೋಗ್ಯತೆಯಿಲ್ಲ ಎಂಬ ನೆಪವನ್ನೊಡ್ಡುತ್ತಾ ಬಂದರು. ಅನೇಕ ಕನ್ನಡ ಆಡಳಿತ ಭಾಷಾ ಸಮಿತಿಗಳು, ಕನ್ನಡ ಕಾವಲು ಸಮಿತಿಗಳು ಬಂದು ಹೋದರೂ ಇಂದಿಗೂ ಇಂಗ್ಲಿಷ್ ಅನ್ನು ಆಡಳಿತ ಭಾಷೆಯನ್ನಾಗಿ, ಶಿಕ್ಷಣ ಭಾಷೆಯನ್ನಾಗಿ ಮುಂದುವರಿಸುತ್ತಿದ್ದಾರೆ.

ಹೀಗೆ ಸಮೃದ್ಧ ಕರ್ನಾಟಕದ ಆರ್ಥಿಕ ಪ್ರಗತಿಯ ಲಗಾಮು ಕೇಂದ್ರ ಸರ್ಕಾರದ ಬಳಿಯೇ ಉಳಿದುದರ ಫಲವಾಗಿ, ಬಂಡವಾಳಶಾಹಿ ಬೆಳವಣಿಗೆಯ ಪಥದಿಂದಾಗಿ ಪ್ರಾದೇಶಿಕ ಅಸಮಾನತೆಗಳು ತೀವ್ರವಾದುದರ ಪರಿಣಾಮವಾಗಿ ಕನ್ನಡ ಭಾಷೆಗೆ ಮಾನ್ಯತೆ ದೊರೆಯದ್ದರ ಪರಿಣಾಮವಾಗಿ ಜನರಲ್ಲಿ ಅಸಂತೃಪ್ತಿ, ಅಶಾಂತಿ ತಲೆದೋರಿತು.

ಸಹಜವಾದ ನೈಜವಾದ ಅಸಂತೃಪ್ತಿ ಪ್ರಜಾಸತ್ತಾತ್ಮಕ ಮಾರ್ಗ ಹಿಡಿದು ಕನ್ನಡ ಭಾಷೆಯ ಆಡಳಿತ, ಶಿಕ್ಷಣ, ನ್ಯಾಯಾಂಗದ ಭಾಷೆಯನ್ನಾಗಿ ಮಾಡುವ ಕೇಂದ್ರ ಸರಕಾರದಿಂದ ಹೆಚ್ಚಿನ ಅಧಿಕಾರ ಪಡೆದು ಕನ್ನಡಿಗರ ಬದುಕು ಅರಳಿಸುವ ಪ್ರಜಾಸತ್ತಾತ್ಮಕ ಶಕ್ತಿಗಳು ಬಲಗೊಳ್ಳುವುದರ ಬದಲಾಗಿ ವಿಚ್ಛಿದ್ರಕಾರಿ ಭಾವನೆಗಳಿಗೆ ಗೊಬ್ಬರವಾಯಿತು.

ಕರ್ನಾಟಕ 'ಏಕೀಕರಣವಾದಂದಿನಿಂದ ಇಂದಿನವರೆಗೆ ಅನೇಕ ಚಳುವಳಿಗಳು ಮೊಳೆತವು.ಅವುಗಳಲ್ಲಿ ಪ್ರಮುಖವಾದವು.

1.ಎರಡು ಹಂತಗಳಲ್ಲಿ ನಡೆದ ಕನ್ನಡ ಚಳುವಳಿ

2.ಮಹಾಜನ್ ವರದಿ ಇತ್ಯಾದಿ ಗಡಿ ಚಳುವಳಿ

3.ಗೋಕಾಕ್‌ಹಾಗೂ ರಾಜಕುಮಾರ್ ಚಳುವಳಿ.

ಕನ್ನಡ ಚಳುವಳಿ

ಸ್ವಾತಂತ್ರ್ಯ ಲಭಿಸುವ ವೇಳೆಗೆ ಹಿಂದಿ ಚಿತ್ರರಂಗ ಹಾಗೂ ತಮಿಳು ಚಿತ್ರರಂಗ ಬಲವಾಗಿ ಬೆಳೆದಿದ್ದವು. ಕನ್ನಡ ಚಿತ್ರರಂಗವು ಬೆಳೆದರೂ ಈ ಎರಡು ರಂಗಗಳ ಪೈಪೋಟಿ ಬೆಳವಣಿಗೆಯಾಗಲಿಲ್ಲ. ಹೀಗಾಗಿ ಚಿತ್ರರಂಗದ ಮಾರುಕಟ್ಟೆಯ ಮೇಲೆ ಹಿಡಿತಕ್ಕಾಗಿ ಕನ್ನಡ ಚಿತ್ರರಂಗದ ಬಂಡವಾಳ ಹೋರಾಟ ಹೂಡಬೇಕಾಯಿತು. ಇದು ಒಂದು ಕಡೆಯಾದರೆ ವಿದ್ಯಾಭಿವೃದ್ಧಿ, ನಿರೀಕ್ಷಿತ ಮಟ್ಟದಲ್ಲಿ ಬೆಳೆಯದೆ ಕನ್ನಡ ಸಾಹಿತ್ಯ ಮಾರಾಟವೂ, ಪ್ರಕಾಶನ ಉದ್ಯಮವೂ ಕುಂಠಿತಗೊಳ್ಳುವುದು ಸಹಜ. ಇದರ ಜೊತೆಗೆ ಸಿನಿಮಾದ ಆಘಾತದಿಂದ ಕಂಪನಿ ನಾಟಕಗಳ ಹಲಸು ಬೆಳೆ ಕಮರಿಹೋಯಿತು. ಈ ಕಲಾವಿದರು ಬೀದಿ ಪಾಲಾದರು. ಇವೆಲ್ಲದರ ಫಲವಾಗಿ ಏಕೀಕರಣವಾದ ತರುಣದಲ್ಲಿಯೇ "ಕನ್ನಡ ಚಳುವಳಿ"ಎಂಬ ಹೆಸರಿನಲ್ಲಿ ಕನ್ನಡ ಸಿನೇಮಾ, ಕನ್ನಡ ಸಂಗೀತ, ಕನ್ನಡ ನಾಟಕ, ಕನ್ನಡ ಸಾಹಿತ್ಯಕ್ಕಾಗಿ ಚಳುವಳಿ ಆರಂಭವಾಯಿತು.

ಈ ಚಳವಳಿ ಕನ್ನಡಕ್ಕೆ ಸಿಗಬೇಕಾದ ಪ್ರಜಾಸತ್ತಾತ್ಮಕ ಸ್ಥಾನಮಾನ ಕರ್ನಾಟಕದ ಆರ್ಥಿಕ ಅಭಿವೃದ್ಧಿ, ಶಿಕ್ಷಣ ಅಭಿವೃದ್ಧಿಗಾಗಿ ವ್ಯಾಪಕವಾಗಿ ದುಡಿಯದೆ ಸೀಮಿತ ಉದ್ದೇಶವನ್ನು ಉಳ್ಳದ್ದರಿಂದ ಈ ಚಳುವಳಿಯ ಮುಂದಾಳುಗಳು ಸಮಸ್ಯೆಯ ಮೂಲವನ್ನು ತಿಳಿಯದೆ ಕೊಂಬೆರೆಂಬೆಗಳನ್ನು ಕತ್ತರಿಸುವುದರಲ್ಲಿಯೇ ತೊಡಗಿದ್ದರಿಂದ ಬಹಳ ಶೀಘ್ರವಾಗಿ ಭಾಷಾ ಅಲ್ಪಸಂಖ್ಯಾತರ ವಿರುದ್ಧ ತಿರುಗಿತು. ಬೆಂಗಳೂರಿನಲ್ಲಿ ಬಹಳ ತೀವ್ರವಾಗಿದ್ದ ಚಳುವಳಿ ಬೆಂಗಳೂರಿನ ತಮಿಳು, ಮಲೆಯಾಳಿ ಭಾಷಿಕರ ವಿರುದ್ಧ ತಿರುಗಿತು. ಮುಖ್ಯವಾಗಿ ದುಡಿಯುವ ವರ್ಗಕ್ಕೆ ಸೇರಿದ್ದ ಈ ಭಾಷಾ ಅಲ್ಪಸಂಖ್ಯಾತರನ್ನು ಬೆದರಿಸುವ ಪ್ರಯತ್ನದಲ್ಲಿ ಕಾರ್ಮಿಕರ ಮಧ್ಯೆ ಒಡಕನ್ನು ಹುಟ್ಟಿಸಿತು. ಇಂದಿಗೂ ಕನ್ನಡ ಹಿತರಕ್ಷಣಾ ಸಮಿತಿ, ಇತ್ಯಾದಿಗಳಹೆಸರಿನಲ್ಲಿ ಈ ಭಾವನೆಗಳು ಕಾರ್ಮಿಕರನ್ನು ಒಗ್ಗೂಡಿಸುವುದಕ್ಕೆ ಅಡ್ಡಿಯಾಗಿದ. ಕಾರ್ಮಿಕರ ದಿನನಿತ್ಯದ ಬೇಡಿಕೆಗಳಿಗೆ ಸ್ಪಂದಿಸುವ ಪ್ರಜಾಸತ್ತಾತ್ಮಕ ಚಳುವಳಿಗಳು ಇದರ ವಿರುದ್ಧ ಹೋರಾಡುತ್ತಿವೆ.

ಈ ಕನ್ನಡ ಚಳುವಳಿಯ ಫಲವಾಗಿ ಹುಟ್ಟಿದ ರಾಜ್ಯೋತ್ಸವಗಳು ಇಂದಿಗೂ ಕನ್ನಡದ ಹಿಂದಿನ ಹಿರಿಮೆ ಗರಿಮೆಯನ್ನು ಕೊಂಡಾಡುತ್ತಾ ಪುಲಿಕೇಶಿ, ನೃಪತುಂಗ ಮಂಟಪಗಳಲ್ಲಿ ಇತಿಹಾಸದ ವೈಭವೀಕರಣ ನಡೆಸುತ್ತಾ ಪಾಳೆಯಗಾರಿ ಮೌಲ್ಯಗಳನ್ನು ಬಿತ್ತುತ್ತಾ ಹೋಗುತ್ತಿರುವುದನ್ನು ನೋಡಬಹುದು. ಇಂದಿಗೂ ಈ ರಾಜ್ಯೋತ್ಸವಗಳು ಬೆಂಗಳೂರಿನಲ್ಲಿಯೇ ತೀವ್ರವಾಗಿರುವುದು. ಇಲ್ಲಿಂದ ಬೇರೆ ಕೆಲವು ಜಿಲ್ಲಾ ಕೇಂದ್ರಗಳಿಗೆ ನಿಧಾನವಾಗಿ ಹಬ್ಬಿವೆ. ಬೆಳಗಾಂನಲ್ಲಿ ಗಡಿ ಪ್ರಶ್ನೆಯ ಫಲವಾಗಿ ಸ್ವಲ್ಪ ಮಟ್ಟಿಗೆ ಆಚರಿಸಲ್ಪಡುತ್ತಿದೆ.

ಕನ್ನಡ ಚಳುವಳಿಯ ನಾಯಕರುಗಳು ರಾಜಕೀಯವಾಗಿ ಬೆಂಗಳೂರಿನಲ್ಲಿ ನಗರ ಸಭೆಯಲ್ಲಿ ನಂತರ ವಿಧಾನಸಭೆಯಲ್ಲಿ ಒಂದು ಸ್ಥಾನ ಪ್ರವೇಶ ಪಡೆದರೆಂಬುದನ್ನು ಜೊತೆಗೆ ಆಗ್ಗಾಗ್ಗೆ ರೈಲ್ವೆ ಮಾರ್ಗಗಳಂತಹ ಪ್ರಜಾಸತ್ತಾತ್ಮಕ ಬೇಡಿಕೆಗಳನ್ನು ತಮ್ಮ ಅನೇಕ ಬೇಡಿಕೆಗಳ ಜೊತೆ ಮೇಳವಿಸಿಕೊಂಡಿದ್ದರೆಂಬುದನ್ನು ಗಮನಿಸಬೇಕು.

ಹಿಂದಿ ಹೇರಿಕೆ ವಿರೋಧಿ ಚಳುವಳಿ

ಕೇಂದ್ರ ಸರಕಾರ ಅಖಿಲ ಭಾರತ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಂವಿಧಾನದ ಮನ್ನಣೆ ಪಡೆದಭಾಷೆಗಳೆಲ್ಲಕ್ಕೂ ಸಮಾನ ಅವಕಾಶ ನೀಡದಿರುವುದರಿಂದ ಹಿಂದಿಯನ್ನು, ನೇರವಾಗಿ ಒಮ್ಮೆ ತೆರೆಮರೆಯಲ್ಲಿ ಒಮ್ಮೆ ಶಿಕ್ಷಣದಲ್ಲಿ ಕಡ್ಡಾಯದ ಮೂಲಕ, ಆಕಾಶವಾಣಿ, (ಈಗ ದೂರದರ್ಶನವೂ) ಮೊದಲಾದ ಪ್ರಸಾರ ಮಾಧ್ಯಮಗಳ ಮೂಲಕ, ತನ್ನ ಇಲಾಖೆಗಳ ಮೂಲಕ, ಎಲ್ಲಕ್ಕೂ ಹೆಚ್ಚಾಗಿ ಜನರೊಂದಿಗೆ ದಿನ ನಿತ್ಯ ಸಂಪರ್ಕವಿಡುವ ಬ್ಯಾಂಕ್, ಎಲ್.ಐ.ಸಿ.ಗಳ ಮೂಲಕ ಹೇರುವುದರಿಂದ ಹಿಂದಿಯೇತರ ಭಾಷೆಗಳ ಜನರು ಹಿಂದಿ ಬಗ್ಗೆ ಅತ್ಯುಗ್ರವಾಗಿ ಪ್ರತಿಭಟಿಸ ಬೇಕಾಗಿದೆ. ಕನ್ನಡದಲ್ಲಿ ಓದು ಕಲಿತ ಒಳ್ಳೆಯ ಪ್ರತಿಭಾವಂತನೂ ಕೂಡ ಈ ಇಲಾಖೆಗಳ ವ್ಯವಹಾರಗಳಲ್ಲಿ ನಿಸ್ಸಹಕಾರನಾಗುತ್ತಾನೆ. ಕೇವಲ ಹಿಂದಿ ಕಲಿತವರಿಗೆ ಮಾತ್ರ ಐ.ಎ.

(5ನೇ ಪುಟ ನೋಡಿ)

ಪಕ್ಷದ ಕಾರ್ಯಕ್ರಮದಿಂದ

ಭಾಷಾ ಸಮಸ್ಯೆಯನ್ನು ತೃಪ್ತಿಕರವಾಗಿ ಪರಿಹರಿಸಿಲ್ಲ. ವಿವಿಧ ರಾಜ್ಯಗಳ ಭಾಷೆಗಳು ಆಡಳಿತ ಭಾಷೆ, ನ್ಯಾಯಾಲಯ ಭಾಷೆ, ಶಿಕ್ಷಣ ಮಾಧ್ಯಮಗಳೆಂದು ಇನ್ನೂ ಸ್ವೀಕರಿಸಲ್ಪಡ ಬೇಕಾಗಿದೆ. ನಮ್ಮ ಆಡಳಿತ ಮತ್ತು ಶಿಕ್ಷಣಗಳಲ್ಲಿ ಇಂಗ್ಲಿಷ್‌ನದ್ದೇ ಮೇಲುಗೈಯಾಗಿದೆ. ಆಡಳಿತ ಮತ್ತು ಶಿಕ್ಷಣ ರಂಗಗಳಲ್ಲಿ ಪ್ರಾದೇಶಿಕ ಭಾಷೆಗಳಿಗೆ ನ್ಯಾಯವಾಗಿ ಸಿಕ್ಕ ಬೇಕಾದ ಸ್ಥಾನ ಸಿಕ್ಕುವುದಕ್ಕೆ ಮೊದಲೇ, ಸಂಸತ್ತು ಮತ್ತು ಕೇಂದ್ರ ಆಡಳಿತ ರಂಗಗಳಲ್ಲಿ ಅವುಗಳಿಗೆ ಸಮಾನ ಸ್ಥಾನವನ್ನು ನಿರಾಕರಿಸುತ್ತಿದ್ದಂತೆಯೇ, ಹಿಂದಿಯೇತರ ಜನಗಳ ಮೇಲೆ ಇಂಗ್ಲಿಷ್‌ನ ಸ್ಥಾನದಲ್ಲಿ ಹಿಂದಿಯನ್ನು ಹೇರುವ ಪ್ರಯತ್ನಗಳು ನಡೆದಿವೆ. ಇದರಿಂದಾಗಿ ಹಿಂದಿಯೇತರ ಜನರು ತಮ್ಮ ಭಾಷೆಗೆ ಸಲ್ಲಬೇಕಾದ ನ್ಯಾಯವಾದ ಸ್ಥಾನವು ಸಿಕ್ಕುವುದಿಲ್ಲೆಂದೂ, ಅದನ್ನು ದಮನಿಸಲಾಗುವುದೆಂದೂ ಭಯ ಪಡುವಂತಾಗಿದೆ.

ಮೂವತ್ತೊಂದಕ್ಕೆ ಕಾಲಿಟ್ಟ ಕರ್ನಾಟಕ ರಾಜ್ಯ

[ಒಂದನೇ ಪುಟದಿಂದ]

ಕೈಗಾರಿಕೋದ್ಯಮದ ಕುರಿತು ಅಸಮರ್ಪಕ ನೀತಿ. ದಿವಸಕ್ಕೆ 1000 ಕೈಗಾರಿಕೆ ಸ್ಥಾಪಿಸುತ್ತೇವೆಂಬ ಎಸ್. ಆರ್. ಬೊಮ್ಮಾಯಿ ಅವರ ಹೇಳಿಕೆ ಅರ್ಥ ಹೀನ. ರಾಜ್ಯದಲ್ಲಿರುವ ಸಣ್ಣ ಕೈಗಾರಿಕಾ ಎಸ್ಟೇಟ್‌ಗಳಲ್ಲಿ ಸಂದರ್ಶಿಸಿದರೆ ಆ ಎಸ್ಟೇಟ್‌ಗಳನ್ನು ಅರ್ಧಕ್ಕಿಂತಲೂ ಹೆಚ್ಚು ಸಣ್ಣ ಕೈಗಾರಿಕಾ ಘಟಕಗಳು ಮುಚ್ಚಲ್ಪಟ್ಟಿರುವುದನ್ನು ಕಾಣಬಹುದು. ಕಾರಣ ಕಚ್ಚಾ ಮಾಲಿನ ಅಭಾವ, ಮಾರ್ಕೆಟ್ ವ್ಯವಸ್ಥೆಯ ಕೊರತೆ, ದೊಡ್ಡ ಕೈಗಾರಿಕೆಗಳ ಜೊತೆಯಲ್ಲಿ ಪೈಪೋಟಿ ನಡೆಸಲು ಸಾಧ್ಯವಾಗದಿರುವುದು, ಬಂಡವಾಳದ ಅಭಾವ, ರಾಜ್ಯ ಸರ್ಕಾರದ ಕೈಗಾರಿಕಾ ನೀತಿಗಳಲ್ಲಿ ಮುಖ್ಯ ಕಾರಣಗಳಾಗಿವೆ.

ಇದರ ಜೊತೆಯಲ್ಲಿ ಮಧ್ಯಮ ಮತ್ತು ದೊಡ್ಡ ಕೈಗಾರಿಕೆಗಳೂ ಮುಚ್ಚಲ್ಪಟ್ಟಿವೆ. ಭದ್ರಾವತಿ ಉಕ್ಕಿನ ಕಾರ್ಖಾನೆಯೂ ಮುಚ್ಚಲ್ಪಡುವ ಅಂಚಿನಲ್ಲಿದೆ. ಹಾನಿಯ ನೆವ ಮುಂದೊಡ್ಡಿ ಕಾರ್ಖಾನೆಗಳನ್ನು ಮುಚ್ಚುವ ಮಾಲಕರ ನೀತಿಯನ್ನು ಖಂಡಿಸಿ, ಅಂಥ ಕಾರ್ಖಾನೆಗಳನ್ನು ಸರ್ಕಾರವೇ ವಹಿಸಿಕೊಂಡು ನಡೆಸಿ ಕಾರ್ಮಿಕರ ತೊಂದರೆ ನಿವಾರಿಸಬೇಕೆಂಬ ಒತ್ತಾಯವನ್ನು ಕೈಗಾರಿಕಾ ಮಂತ್ರಿ ಜೆ.ಎಚ್. ಪಟೇಲರು ಒಪ್ಪುತ್ತಿಲ್ಲ. ಕಾರಣ ಕಾರ್ಮಿಕರು ಬೀದಿಪಾಲಾಗುವುದು ತಪ್ಪಿಲ್ಲ. ಹತ್ತಿ ಗಿರಣಿಗಳ ಕುರಿತು ಕೇಂದ್ರ-ರಾಜ್ಯ ಸರ್ಕಾರಗಳ ನೀತಿ ಗಂಡಾಂತರಕಾರಿಯಾಗಿದೆ. ಈಗಾಗಲೇ ಮೈಸೂರಿನ ಕೆ.ಆರ್. ಮಿಲ್‌ನ್ನು ಪರಬಾರೇ ಮಾಡಲು ರಾಜ್ಯ ಸರ್ಕಾರ ಒಪ್ಪಿಗೆ ನೀಡಿದೆ. ನಾಲ್ಕೈದು ಸಾವಿರ ಕೆಲಸಗಾರರನ್ನು ಬೀದಿಪಾಲು ಮಾಡಿದೆ. ದಾವಣಗೆರೆಯ ಮೂರು ಗಿರಣಿಗಳು ಮುಚ್ಚಲ್ಪಟ್ಟಿವೆ. ಬಿಜಾಪುರ, ಬಾಗಲಕೋಟೆಯ ನೂಲಿನ ಗಿರಣಿಗಳು ಮುಚ್ಚುವ ಹಂತದಲ್ಲಿವೆ. ವಿದೇಶಗಳಲ್ಲಿ ಭಾರತದ ನೂಲು ಮತ್ತು ಬಟ್ಟೆಗೆ ಸಾಕಷ್ಟು ಬೇಡಿಕೆ ಇದೆಂದು ಹೇಳುತ್ತಿರುವಾಗಲೇ ಬಟ್ಟೆ ಮತ್ತು ನೂಲಿನ ಗಿರಣಿಗಳು ಮುಚ್ಚಿರುವುದು ಮುಚ್ಚಲ್ಪಡುವ ಅಂಚಿನಲ್ಲಿರುವುದು ಸರ್ಕಾರದ ನೀತಿಯ ಪ್ರತಿಫಲವಾಗಿದೆ. ಕೈಮಗ್ಗ ಮತ್ತು ಪವರಲೂಮ್ ಕಾರ್ಖಾನೆಗಳೂ ಬಿಕ್ಕಟ್ಟನಲ್ಲಿವೆ.

ಕಾರ್ಮಿಕ ರಂಗದಲ್ಲಿ ಸರ್ಕಾರ ಹಲವಾರು ಅಸಂಘಟಿತ ಕಾರ್ಮಿಕರಿಗೆ ಕನಿಷ್ಟ ವೇತನ ನಿಗದಿಪಡಿಸಿಲ್ಲ. ಕೆಲವು ಕೈಗಾರಿಕೆಗಳಲ್ಲಿ ನಿಗದಿಪಡಿಸಿದ್ದರೂ ಅದು ಜ್ಯಾರಿಗೊಳ್ಳುತ್ತಿಲ್ಲ. ತುಟ್ಟಿಭತ್ತೆ ನಿರ್ಧರಿಸುವ ನೀತಿ ಅಶಾಸ್ತ್ರೀಯವಾಗಿದೆ. ಕಾರ್ಮಿಕರಿಗೆ ನೌಕರಿ ಭದ್ರತೆಯಿಲ್ಲ. ತಮ್ಮ ಪಾಲಿನ ಪ್ರಾವಿಡೆಂಟ್ ಫಂಡ್ ಹಣ ತುಂಬದೆ ಮಾಲಕ ವರ್ಗ ಕಾರ್ಮಿಕರಿಗೆ ಮೋಸ ಮಾಡುತ್ತಿದೆ.

ಬರಗಾಲ ನಿವಾರಣೆಗೆ ಕಾಯಂ ಯೋಜನೆಗಳಿಲ್ಲ. ನೀರಾವರಿ ಯೋಜನೆಗಳ ಕುರಿತು ನಿರ್ದಿಷ್ಟ ನಿಲುವೆಯಿಲ್ಲ. ಪಡ ಮತ್ತು ಫಾರೆಸ್ಟ್ ಭೂಮಿ ಹಾಗೆಯೇ ಮಾಲಕರ ಹೆಚ್ಚುವರಿ ಭೂಮಿ ಹೀನರಿಗೆ, ಹರಿಜನ-ಗಿರಿಜನರಿಗೆ ಹಂಚಲ್ಪಡುತ್ತಿಲ್ಲ. ಕೃಷಿಕಾರ್ಮಿಕರಿಗೆ ಕನಿಷ್ಟ ವೇತನ ಲಭ್ಯವಿಲ್ಲ. ಭೂಸುಧಾರಣೆ ರೈತರ ಪರವಾಗಿಲ್ಲ. ಗ್ರಾಮಾಂತರ ಪ್ರದೇಶದಲ್ಲಿ ಇಂದಿಗೂ ಭೂಮಾಲಕರ-ಸಾವುಕಾರರ, ಜಾತೀಯ ಪ್ರಭಾವಿತ ಶಕ್ತಿಗಳ ಪ್ರಾಬಲ್ಯವೇ ಮುಂದುವರಿದಿದೆ. ಮಧ್ಯಮ-ಬಡ ರೈತರ ಅಭಿಪ್ರಾಯಗಳಿಗೆ ಬೆಲೆ ಇಲ್ಲದಂತಾಗಿದೆ. ಕಾರಣ ಹಳ್ಳಿಗಾಡಿನ ಜನಜೀವನದಲ್ಲಿ ಬದಲಾವಣೆ ಇಲ್ಲದಂತಾಗಿ ಬದಲಾವಣೆ ಬಾರದಂತೆ ಮಾಡುವ ಶಕ್ತಿಗಳ ಪ್ರಭಾವ ಮೇಲ್ಗೈ ಕಂಡುಬರುತ್ತಿದೆ.

ಜನತಾ ಪಕ್ಷದೊಳಗೆ ಜಾತೀಯ ಗುಂಪುಗಳ ಪ್ರಭಾವ, ಅಧಿಕಾರಕ್ಕಾಗಿ ಕಚ್ಚಾಟ ಹೆಚ್ಚಾಗುತ್ತಿದೆ. ಆ ಕಾರಣದಿಂದ ಆಡಳಿತೆಯಲ್ಲಿ ಮೊದಲಿಗಿಂತಲೂ ಜಾಸ್ತಿ ಅಧಕ್ಷತೆ ಮತ್ತು ಭ್ರಷ್ಟಾಚಾರ ಬೆಳೆದಿದೆ.

ಕರ್ನಾಟಕ ಏಕೀಕರಣಕ್ಕಾಗಿ ದುಡಿದ ಜನರಿಗೆ, ಏಕೀಕರಣದಿಂದಾಗಿ ರಾಜ್ಯದ ಸರ್ವತೋಮುಖ ಬೆಳವಣಿಗೆ ಹೋಗುತ್ತದೆ, ರಾಜ್ಯದಲ್ಲಿ ಹುದುಗಿರುವ ನೆಲ-ಜಲ ಅರಣ್ಯ ಸಂಪತ್ತಿನ ಪೂರ್ಣ ಉಪಯೋಗ ಜನರಿಗೆ ಲಭ್ಯವಾಗುತ್ತದೆಂದು ಆಶಿಸಿದ್ದೆವು. ಕರ್ನಾಟಕದಲ್ಲಿ ಕೈಗಾರಿಕೋದ್ಯಮ ಬೆಳೆಯುತ್ತದೆ. ಮಂಗಳೂರು ಮುಂಬಯಿರೈಲ್ವೆ ಆಗುತ್ತದೆ. ಪೆಟ್ರೋಕೆಮಿಕಲ್ಸ್ ಕಾರ್ಖಾನೆ ಸ್ಥಾಪನೆಯಾಗುತ್ತದೆ, ರಾಜ್ಯದಲ್ಲಿ ರೈತರುಗಳ ಅಭಿವೃದ್ಧಿಯಾಗುತ್ತದೆ, ವಿಜಯನಗರ ಉಕ್ಕಿನ ಕಾರ್ಖಾನೆ ರಚನೆಯಾಗುತ್ತದೆ ಎಂದೆಲ್ಲ ಆಸೆ ಇಟ್ಟುಕೊಂಡಿದ್ದೆವು. ಆದರೆ ಆಸೆ ನಿರಾಸೆಯಾಗಿದೆ. ಚುನಾಯಿತ ಲೋಕ ಸಭಾ ಸದಸ್ಯರೂ, ಬೇಡಿಕೆಗಳ ಸಲುವಾಗಿ ಒತ್ತಾಯ ಮಾಡುತ್ತಿಲ್ಲ, ರಾಜ್ಯ ಸರಕಾರವೂ ಪರಿಣಾಮಕಾರಿಯಾದ ಕಾರ್ಯಕ್ರಮ ಹಮ್ಮಿಕೊಂಡು ಜನ ಬೆಂಬಲ ಪಡೆದು ಕೇಂದ್ರದ ಮೇಲೆ ಒತ್ತಾಯತರುವ ಪ್ರಯತ್ನದಲ್ಲಿಲ್ಲ.

ಕರ್ನಾಟಕ ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ಜಾತೀಯ ಮತೀಯ ಪ್ರತ್ಯೇಕತಾವಾದಿ ಶಕ್ತಿಗಳ ವಿರುದ್ಧ ಜನರಲ್ಲಿ ಹೊಸ ಜಾಗೃತಿ ಉಂಟು ಮಾಡಿ ರಾಜ್ಯದ ಸರ್ವತೋಮುಖ ಅಭಿವೃದ್ಧಿ ಸಾಧಿಸಲು ಒಟ್ಟಾಗಿ ದುಡಿಯೋಣ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಹಾಗೆಯೇ ಸಿ.ಐ.ಟಿ.ಯು, ಪ್ರಾಂತ ರೈತಸಂಘ, ಡಿವೈಎಫ್ಐ, ಎಸ್‌ಎಫ್‌ಐಗಳೆಲ್ಲ, ಕಳೆದಬಂದು ವರ್ಷದಲ್ಲಿ ಸರಕಾರದ ಜನ ವಿರೋಧಿ ನೀತಿಗಳ ವಿರುದ್ಧ ರೈತ ಕಾರ್ಮಿಕರ ರಕ್ಷಣೆಗಾಗಿ, ಹಲವಾರು ಹೋರಾಟವನ್ನು ನಡೆಸಿದೆ. ಅವುಗಳ ಪ್ರತಿಫಲವಾಗಿ, ಭೂಮಿಯ ಹಕ್ಕು, ಸ್ವಲ್ಪ ಕೂಲಿಯಲ್ಲಿ ಹೆಚ್ಚಳ, ಮತ್ತಿತರ ಕೆಲವು ಸೌಲಭ್ಯಗಳನ್ನು ಪಡೆಯಲು ಸಾಧ್ಯವಾಗಿದೆ. ಸಿ.ಪಿ.ಐ(ಎಂ) ಮತ್ತು ಇತರ ಎಡ ಪ್ರಜಾಪ್ರಭುತ್ವ ಶಕ್ತಿಗಳ ಮೇಲೆ ಗುರುತರವಾದ ಜವಾಬ್ದಾರಿಯಿದೆ. ಕರ್ನಾಟಕದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಸಾಕಷ್ಟು ಪ್ರಭಾವಿತವಾಗಿ ಬೆಳೆದುಬಾರದಿರುವುದರಿಂದ ಜನತಾ ಪಕ್ಷದಲ್ಲಿ ಜಾತೀಯವಾದಿಗಳ ಪ್ರಭಾವ ಹೆಚ್ಚಾಗಿ, ಪ್ರಗತಿಶೀಲ, ಎಡಪಂಥದ ಪರವಾದ ಪರಿಸರ, ವಾತಾವರಣ ನಿರ್ಮಿಸಲು ಸಾಧ್ಯವಾಗುತ್ತಿಲ್ಲ. ಅದು ಕರ್ನಾಟಕದ ಪ್ರಗತಿಗೆ ಅಡ್ಡ ಬರುವುದಷ್ಟೇ ಅಲ್ಲ ರಾಜ್ಯದಲ್ಲಿ ಕಾಂಗ್ರೆಸ್ ಶಕ್ತಿಯನ್ನು ಇನ್ನೂ ಕುಂಠಿತಗೊಳಿಸಿ ಕೇಂದ್ರದಲ್ಲಿಯ ಆದರ ರಾಜೀವ ಸರಕಾರವನ್ನು ಅಧಿಕಾರದಿಂದ ಕೆಳಗಿಳಿಸಿ, ದೇಶದ ಐಕ್ಯತೆ, ಸಮಗ್ರತೆಯನ್ನೂ, ಜಾತೀಯ ಸೌಹಾರ್ದತೆಯನ್ನು ಕಾಪಾಡಲಿಕ್ಕೆ ಕಾಂಗ್ರೆಸ್ ಬದಲಿ ವ್ಯವಸ್ಥೆಯಾದ ಎಡ ಮತ್ತು ಪ್ರಜಾಪ್ರಭುತ್ವ ರಂಗದ, ಬೆಳವಣಿಗೆಗೆ ಸಹಾಯವಾಗುತ್ತಿಲ್ಲಾ. ಇಂಥ ಪರಿಸ್ಥಿತಿಯಲ್ಲಿ ಬದಲಾವಣೆ ತರಬೇಕು.

ಕಾರ್ಮಿಕರಲ್ಲಿ ಆರ್ಥಿಕತೆಯ ಪ್ರಭಾವ ಹೆಚ್ಚಾಗುತ್ತಿದೆ. ಅದು ಸಮತಾವಾದಿ ರಾಜಕೀಯದತ್ತ ವಾಲುವಂತೆ ಮಾಡಬೇಕು. ಯುವಕರು ವಿದ್ಯಾರ್ಥಿಗಳು ವಿದೇಶಿ ಸಂಸ್ಕೃತಿ, ಜಾತೀಯ ಭಾವನೆಗಳ ಪ್ರಭಾವಕ್ಕ ಹೆಚ್ಚೆಚ್ಚಾಗಿ ಬಲಿಯಾಗುತ್ತಿದ್ದಾರೆ. ಅವರನ್ನು ಪುರೋಗಾಮಿ ವಿಚಾರ ಧಾರೆಯತ್ತ ಎಳೆಯಬೇಕು. ಅವರು ಎದುರಿಸುತ್ತಿರುವ ನಿರುದ್ಯೋಗ, ನಿರುಪಯೋಗಿ ಶಿಕ್ಷಣಗಳಿಗೆಲ್ಲ ಈಗಿರುವ ಬಂಡವಾಳಶಾಹಿ ಆರ್ಥಿಕ ರಚನೆ, ಸಾಮಾಜಿಕ ಪದ್ಧತಿಗಳೇ ಕಾರಣವೆಂದೂ, ಸಮತಾವಾದದಿಂದ ಮಾತ್ರ ಅವರು ಎದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಸಿಗಲು ಸಾಧ್ಯವೆಂಬ ಅಂಶವನ್ನು ಅವರಲ್ಲಿ ಮನದಟ್ಟು ಮಾಡಬೇಕು. ಎಡ ಶಕ್ತಿಗಳತ್ತ ಅವರು ಬರುವಂತೆ, ಛಿದ್ರಕಾರಿ, ಉಗ್ರಗಾಮಿ, ಜಾತೀವಾದಿ ಮತೀಯ ಶಕ್ತಿಗಳ ಬಲೆಗೆ ಬೀಳದಂತೆ ಪ್ರಯತ್ನಿಸಬೇಕು.

ಕರ್ನಾಟಕದ ಜನತೆಯ ಸಂಘಟನೆಗೆ, ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಗೆ ಹೋರಾಡುವ ಜವಾಬ್ದಾರಿ, ಕರ್ನಾಟಕದ ಏಕೀಕರಣಕ್ಕಾಗಿ, ಕರ್ನಾಟಕಕ್ಕೆ ಕರ್ನಾಟಕವೆಂಬ ಹೆಸರು ಇಡುವಂತೆ ಪ್ರಯತ್ನಿಸಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೇಲಿದೆ.

ರಾಜ್ಯದಲ್ಲಿ ಜಾತೀಯ ಶಕ್ತಿಗಳ ಪ್ರಭಾವ ಹೆಚ್ಚಾಗುತ್ತಿದೆ. ಅದು ವರ್ಗ ಸಂಘಟನೆಗೆ ಅಡ್ಡಿಯಾಗುತ್ತಿದೆ. ರಾಜ್ಯದ ಸಮಗ್ರ ಬೆಳವಣಿಗೆಗೆ ಆತಂಕ ಒಡ್ಡುತ್ತಿದೆ. ಆಡಳಿತೆಯಲ್ಲಿ ಶಿಥಿಲತೆಯನ್ನುಂಟು ಮಾಡುತ್ತಿದೆ. ಸ್ವಹಿತ ಸಾಧಕರಿಗೆ ಆಶ್ರಯದಾಮವಾಗುತ್ತಿದೆ. ಆದ ಕಾರಣ ಈ ವರ್ಷ ರಾಜ್ಯೋತ್ಸವದ ಸಂದರ್ಭದಲ್ಲಿ ಅಂಥ ಅನಿಷ್ಟಗಳ ವಿರುದ್ಧ ಹೋರಾಡಿ, ಕರ್ನಾಟಕದಲ್ಲಿ ರೈತ-ಕಾರ್ಮಿಕರ, ಯುವ ಜನತೆಯ ಬಲಿಷ್ಟ ಸಂಘಟನೆ ಕಟ್ಟಿ, ಧೀರ ಹೋರಾಟ ನಡೆಸಿ, ಕರ್ನಾಟಕದ ಜನತೆಯ ಸಮಸ್ಯೆಗಳಿಗೆ ಪರಿಹಾರ ಒದಗಿಸಲಿ, ಹೊಸ ಜಾಗೃತ ವಾತಾವರಣ ಉಂಟು ಮಾಡಲು ದುಡಿಯುವ ನಿರ್ಧಾರ ಮಾಡಬೇಕಾಗಿದೆ. ಕಾರಣ ಒಟ್ಟಾಗಿ ದುಡಿಯೋಣ, ಕರ್ನಾಟಕದ ಸರ್ವತೋಮುಖ ಅಭಿವೃದ್ಧಿ ಸಾಧಿಸೋಣ.

○

ಭಾಷೆಯ ಬಗ್ಗೆ ಅಭಿಮಾನವೆಂಬುದು ಹೇಗಿರಬೇಕು ?

[4ನೇ ಪುಟದಿಂದ]

ಎಸ್. ಮೊದಲಾದ ಹುದ್ದೆಗಳು, ಅಷ್ಟೇ ಅಲ್ಲ ಕೇಂದ್ರ ಸರಕಾರದ ಯಾವುದೇ ಹುದ್ದೆಗಳು ಎಂಬುದು ಅವನನ್ನು ದಿನನಿತ್ಯ ಕಾಡಿಸುತ್ತದೆ.

ಈ ಬಗ್ಗೆ 60ರ ದಶಕದಲ್ಲಿ ಮೇಲಿಂದ ಮೇಲೆ ಎದ್ದ ಹಿಂದಿ ವಿರೋಧಿ ಭಾವನೆಯ ಅಲೆ ಇನ್ನೂ ಜೀವಂತವಾಗಿದೆ. ಮದ್ರಾಸಿನಿಂದ ಆರಂಭವಾದ ಚಳುವಳಿ ಕರ್ನಾಟಕಕ್ಕೂ ಹರಡಿ ಹಲವು ಬಸ್ಸುಗಳನ್ನು ಸುಡುವುದರಲ್ಲಿ ಗೋಲಿಬಾರುಗಳಲ್ಲಿ ಪರ್ಯವಸಾನವಾಯಿತು. ಕೇಂದ್ರ ಸರಕಾರ ಹಿಮ್ಮೆಟ್ಟಬೇಕಾಯಿತು. ಆದರೆ ಹಿಂಬಾಗಿಲಿನಿಂದ ಹಿಂದಿ ಹೇರುವ ಪ್ರಯತ್ನ ಇಂದೂ ನಡೆದೇ ಇದೆ.

ಇನ್ನೊಂದೆಡೆ ಪ್ರಜಾಪ್ರಭುತ್ವವಾದೀ ದೃಷ್ಟಿಕೋನದ ಅಭಾವದಿಂದಾಗಿ ಈ ಹೇರಿಕೆಯನ್ನು "ಹಿಂದೀ ಸಾಮ್ರಾಜ್ಯಶಾಹಿ"ಎಂದು ತಪ್ಪಾಗಿ ಅರ್ಥೈಸುವ ಹಿಂದಿಯ ಬದಲು ಇಂಗ್ಲೀಷೇ ಇರಲಿ ಎಂಬ ಪ್ರಜಾಪ್ರಭುತ್ವ ವಿರೋಧಿ ನಿಲುವು ತಳೆಯುವುದು ನಾವು ಕಾಣುತ್ತಿದ್ದೇವೆ. ಕನ್ನಡ ಮತ್ತು ಇತರ ಎಲ್ಲಾ ಭಾರತೀಯ ಭಾಷೆಗಳಿಗೆ ಸಮಾನ ಸ್ಥಾನಮಾನ ನೀಡಿದಾಗ ಮಾತ್ರ ಈ ಸಮಸ್ಯೆಗೆ ಪರಿಹಾರ ಸಾಧ್ಯ ಎಂಬುದನ್ನು ಅವರು ಅರಿತುಕೊಳ್ಳುತ್ತಿಲ್ಲ.

ಈ ಮಧ್ಯೆ ಎದ್ದ ಗಡಿ ಪ್ರಶ್ನೆ ಮಹಾಜನ್ ಆಯೋಗದ ವಿರುದ್ಧ, ಪರ ಚಳುವಳಿ ಕನ್ನಡಿಗರ ಭಾವೋದ್ರೇಕಕ್ಕೆ ತೈಲವೆರೆಯಿತು. (ಗಡಿ ಪ್ರಶ್ನೆಯ ಬಗ್ಗೆ ಪ್ರತ್ಯೇಕ ವಿಶ್ಲೇಷಣೆ ನವಂಬರ್ ಮೂರನೆಯ ವಾರದ ಐಕ್ಯರಂಗದಲ್ಲಿ ನಿರೀಕ್ಷಿಸಿ)

ಗೋಕಾಕ್ ಚಳುವಳಿ ಮತ್ತು ನಂತರ

1969ರಲ್ಲಿ ಕಾಂಗ್ರೆಸ್ ಇಬ್ಭಾಗವಾಗಿ"ಗರೀಬಿಹಟಾವೊ" ಕೂಗಿನೊಂದಿಗೆ1971ರಲ್ಲಿ ಆಡಳಿತ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂತು. 1972ರಲ್ಲಿ ರಾಜ್ಯ ವಿಧಾನಸಭೆಗಳಿಗೆ ಚುನಾವಣೆ ನಡೆದಾಗ ಆಡಳಿತ ಕಾಂಗ್ರೆಸ್ ಪಕ್ಷ ರಾಜ್ಯಕ್ಕೆ ವಿಶಾಲ ಮೈಸೂರು ಎನ್ನುವ ಹೆಸರನ್ನು ತೆಗೆದು ಕರ್ನಾಟಕ ಎಂದು ಹೆಸರಿಡುತ್ತೇವೆಂಬ ಕನ್ನಡವನ್ನು ಆಡಳಿತ ಭಾಷೆ ಮಾಡುತ್ತೇವೆಂಬ ಭರವಸೆ ನೀಡಿತು. ಆದರೆ ಅದರಲ್ಲಿ ಕಾರ್ಯಗತವಾಗಿದ್ದು 1973ರಲ್ಲಿ 'ಕರ್ನಾಟಕ' ಎಂಬ ನಾಮಕರಣ ಮಾತ್ರ. ಆಡಳಿತ ಭಾಷೆಯನ್ನಾಗಿ ಕನ್ನಡವನ್ನು ಮಾಡುವ ಮಾತು ಆಮೆ ವೇಗದಲ್ಲಿ ಸಾಗಿತ್ತು. ಇದರ ಫಲವಾಗಿ ಕನ್ನಡ ಚಳುವಳಿಯ ಅದರ ಆರ್ಭಟ ತಗ್ಗಿದರೂ ಜೀವಂತವಾಗಿ ಉಳಿಯಿತು.

"ಇದೋ ಕನ್ನಡವನ್ನು ತಾಲ್ಲೂಕು ಮಟ್ಟಕ್ಕೆ ತಂದು ಬಿಟ್ಟಿದ್ದೇವೆ ! ಇದೇ ಈ ವರ್ಷ ಜಿಲ್ಲಾ ಮಟ್ಟದಲ್ಲಿ ಆಡಳಿತ ಭಾಷೆಯಾಗಿಯೇ ಹೋಯಿತು !! ಇನ್ನೇನು ರಾಜ್ಯ ಮಟ್ಟ ಒಂದೇ ಬಾಕಿ !!! ಎಂದೆಲ್ಲಾ ಬೊಬ್ಬೆ ಹೊಡೆದ ದೇವರಾಜ ಅರಸರ ಕಾಲದಲ್ಲಿ, ಕನ್ನಡ ಜನತೆ ಅತಿ ನಿರೀಕ್ಷೆಯಿಂದ ಕಾದಿದ್ದರು. ಆದರೆ ಸಿಕ್ಕಿದು ಬಹಳಷ್ಟು ಘೋಷಣೆಗಳೇ.

ಇಷ್ಟರಲ್ಲಿ ಸ್ವಾತಂತ್ರ್ಯ ನಂತರ ಹೊಸದಾಗಿ ಆರಂಭಿಸಿದ ಶಾಲೆಗಳಲ್ಲಿ ಶಿಕ್ಷಣ ಕಲಿತು 10ನೇಯವರೆಗೂ ಬಂದವರು ಎಸ್.ಎಸ್.ಎಲ್.ಸಿ.ಯಲ್ಲಿ ಬೇರೆ ಎಲ್ಲಾ ವಿಷಯದಲ್ಲಿಯೂ ತೇರ್ಗಡೆಯಾದ್ದರೂ ಇಂಗ್ಲೀಷಿನಲ್ಲಿ ತೇರ್ಗಡೆಯಾಗಲಿಲ್ಲವೆಂಬ ಏಕ ಮಾತ್ರ ಕಾರಣಕ್ಕಾಗಿ ನಪಾಸು. ಮುಂದೆ ಕನ್ನಡದಲ್ಲಿ ಒಳ್ಳೆಯ ಶಿಕ್ಷಣಲಭ್ಯವಿಲ್ಲ. ಎಲ್ಲಾ ಇಂಗ್ಲಿಷ್ ಮಾಧ್ಯಮದ ದರ್ಬಾರು. ಬಿ.ಇ., ಎಂ.ಬಿ.ಬಿ.ಎಸ್, ಬಿ ಎಸ್ಸಿ (ಕೃಷಿ) ಮೊದಲಾದ ವೃತ್ತಿ ಪರ ಕಾಲೇಜುಗಳ ಮಾತಿರಲಿ, ಬಿ ಎಸ್ಸಿ ಪದವಿಗೂ, ಡಿಪ್ಲಮೊ, ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲೂ ಇಂಗ್ಲಿಷ್ ಮಾಧ್ಯಮವೇ. ಕೇಂದ್ರ ಸರ್ಕಾರದ ಪರೀಕ್ಷೆಗಳಿರಲಿ ರಾಜ್ಯ ಸರ್ಕಾರದ ಪಿ. ಎಸ್ಸಿ. ಮೊದಲಾದ ಉದ್ಯೋಗ ನೇಮಕಾತಿ ಪರೀಕ್ಷೆಗಳಲ್ಲಿಯೂ ಇಂಗ್ಲಿಷ್. ಕರ್ನಾಟಕ ರಾಜ್ಯ ಸರ್ಕಾರದಲ್ಲಿ ಕನಿಷ್ಠ ದರ್ಜೆಯ ಗುಮಾಸ್ತನಾಗಬೇಕಾದರೂ ಇಂಗ್ಲಿಷ್ ಬಂದೇ ತೀರಬೇಕು ಎಂಬ ವಾತಾವರಣದಿಂದ ಉಂಟಾದ ಶಿಕ್ಷಿತರನಿರುದ್ಯೋಗ. ಸರ್ಕಾರಿ, ಖಾಸಗೀ ಉದ್ಯಮಗಳಲ್ಲಿಯೂ ಇದೇ ಪಾಡೇ. ತಮ್ಮ ಜೊತೆಗಾರರು ಇಂಗ್ಲಿಷ್ ಶಿಕ್ಷಣ ಪಡೆದವರು ಎಂಬ ಒಂದೇ ಕಾರಣಕ್ಕಾಗಿ ಒಳ್ಳೆಯ ಸರ್ಕಾರಿ ಹುದ್ದೆ. ತನಗೆ ಹೋಟೆಲ್ ಮಾಣಿಯ, ಸಿನೆಮಾ ಟಿಕೇಟು ಹಂಚುವ ಕೆಲಸ ಎಂಬ ಈ ಅಸಮಾನ ವ್ಯವಸ್ಥೆಯ ಬಗ್ಗೆ ಹೊಸತಾಗಿ ಶಿಕ್ಷಣ ಪಡೆದ, ಉದ್ಯೋಗ ವಂಚಿತರಾದ ಕನ್ನಡಿಗರಲ್ಲಿ ಅಸಮಾಧಾನ ಹೊಗೆಯಾಡತೊಡಗಿತು. ಬೂದಿಮುಚ್ಚಿದ ಕೆಂಡದಂತಿತ್ತು.

(ಗನೇ ಪುಟ ನೋಡಿ)

ಡಿ. ವೈ. ಎಫ್. ಐ. ದ. ಕ. ಜಿಲ್ಲಾ 2ನೇ ಸಮ್ಮೇಳನ

ಸಾಮಾಜಿಕ ಪಿಡುಗಿನ ವಿರುದ್ಧ ಹೋರಾಡಲು ಕರೆ

ಅಕ್ಟೋಬರ್ 25ರಂದು ಬಂಟ್ವಾಳದಲ್ಲಿ ದಿವಂಗತ ಕಾ|| ಗುರುನಾಂಸಿಂಗ್ ಉಪ್ಪಲ್ ನಗರದಲ್ಲಿ ಡಿ.ವೈ.ಎಫ್.ಐ. ದ. ಕ. ಜಿಲ್ಲಾ 2ನೇ ಸಮ್ಮೇಳನ ಬಾಲಕೃಷ್ಣಗಟ್ಟಿಯವರ ಉದ್ಘಾಟನೆಯೊಂದಿಗೆ ಆರಂಭಗೊಂಡಿತು. ಜಿಲ್ಲಾ ಅಧ್ಯಕ್ಷ ಕಾ|| ಬಿ. ಎಂ. ಮಾದವ ಧ್ವಜಾರೋಹಣ ನೆರವೇರಿಸಿದರು. ರಾಜ್ಯ ಅಧ್ಯಕ್ಷರಾದ ಕಾ|| ಮಹಾಬಲ ಒಡೇರಹೋಬ್ಳಿಯವರು ಮುಖ್ಯ ಅತಿಥಿಗಳಾಗಿದ್ದರು. ದೇಶದಲ್ಲಿ ವಿಭಜನಾಕಾರಿ, ಕೋಮುವಾದಿ ಶಕ್ತಿಗಳು ಐಕ್ಯತೆಮುರಿಯಲು ಪ್ರಯತ್ನಿಸುತ್ತಿರುವ ಸಂದರ್ಭದಲ್ಲಿ ನಮ್ಮ ನೂರಾರು ಸಂಗಾತಿಗಳು ಪ್ರಾಣ ಬಲಿದಾನಗಳ ಮೂಲಕ ರಾಷ್ಟ್ರೀಯ ಐಕ್ಯತೆ ಕಾಪಾಡಲು ಪಂಜಾಬ್, ಕೇರಳ ರಾಜ್ಯಗಳಲ್ಲಿ ಹೋರಾಟ ನಡೆಸುತ್ತಿರುವುದನ್ನು ಭಾಷಣಕಾರರು ನೆನಪಿಸಿದರು. ರಾಜಸ್ಥಾನದ ದೇವರಲಾ ಗ್ರಾಮದಲ್ಲಿ ರೂಪ ಕನ್ವರ್ ಮಹಿಳೆಯನ್ನು 'ಸತಿ' ಪದ್ಧತಿಗೆ ಆಹುತಿ ಮಾಡಿದ ಮತಾಂಧತೆ ವಿರುದ್ಧ ಹೋರಾಡಲು ಕರೆ ನೀಡಿದರು.

ಕಾ|| ವಾಸುಗಟ್ಟಿ, ಕಾ|| ಶಂಕರ್, ಕಾ|| ಬಿ. ಎಲ್. ತೋಡಿನಾಯ್ಕ ಹಾಗೂ ಎಸ್. ಎಫ್. ಐ. ಸಮುದಾಯ, ರೈಲ್ವೆ, ಬೀಡಿ, ರೈತ ಸಂಘದ ಮುಖಂಡರು ಶುಭಕೋರಿ ಮಾತನಾಡಿದರು. ಕಾ|| ಬಿ. ಎಂ. ಮಾಧವ, ರಮೇಶ್ ಉಳ್ಳಾಲ್, ಗೋವಿಂದ ಮಾರ್ಗೋಳಿಯವರನ್ನೊಳಗೊಂಡ ಅಧ್ಯಕ್ಷೀಯ ಮಂಡಳಿ ಸಮ್ಮೇಳನ ನಡೆಸಿತು. ಕಾರ್ಯದರ್ಶಿ ಕಾ|| ನಾಗೇಶ್ ಕುಮಾರ್ ವರದಿ ಮಂಡಿಸಿದರು. 10 ಮಂದಿ ಚರ್ಚೆಯಲ್ಲಿ ಪಾಲ್ಗೊಂಡು ಕೆಲ ತಿದ್ದುಪಡಿಯೊಂದಿಗೆ ವರದಿ ಅಂಗೀಕಾರವಾಯಿತು.

ಮಂಗಳೂರು ತೈಲಾಗಾರ, ಕೊಂಕಣ ರೈಲ್ವೆ, ದರ್ಖಾಸ್ತುದಾರರಿಗೆ ಹಕ್ಕುಪತ್ರ, ನಿರುದ್ಯೋಗ ಪರಿಹಾರ ಭತ್ತೆ, ಸ್ಟೈಪೆಂಡರಿ ದಿನಗೂಲಿ, ನೌಕರರ ಖಾಯಂ, ಭ್ರಷ್ಟಾಚಾರದಲ್ಲಿ ಮುಳುಗಿರುವ ರಾಜೀವ್‌ಗಾಂಧಿ ರಾಜೀನಾಮೆ ನೀಡಿ ಚುನಾವಣೆ ಎದುರಿಸಬೇಕು, 'ಸತಿ' ಪದ್ಧತಿ ವಿರುದ್ಧ ಹೋರಾಡುವ ಮುಂತಾದ ನಿರ್ಣಯ ಕೈಗೊಳ್ಳಲಾಯಿತು.

ನೂತನ ಜಿಲ್ಲಾ ಸಮಿತಿಗೆ ಕಾ||ಬಿ. ಎಂ. ಮಾಧವ (ಅಧ್ಯಕ್ಷ) ನಾರಾಯಣ ಆಚಾರ್ (ಉಪಾಧ್ಯಕ್ಷ) ನಾಗೇಶ್ ಕುಮಾರ್ (ಕಾರ್ಯದರ್ಶಿ) ಗೋವಿಂದ ಮಾರ್ಗೋಳಿ, ರಮೇಶ್ ಉಳ್ಳಾಲ್ (ಜೊತೆ ಕಾರ್ಯದರ್ಶಿಗಳು) ಚಂದ್ರಹಾಸ (ಕೋಶಾಧಿಕಾರಿ) ಯವರನ್ನೊಳಗೊಂಡ 19 ಜನ ಆಯ್ಕೆಗೊಂಡರು. ನವಂಬರ್ 4 ರಿಂದ 6ರವರೆಗೆ ಕೋಲಾರದಲ್ಲಿ ನಡೆಯುವ ರಾಜ್ಯ ಸಮ್ಮೇಳನಕ್ಕೆ 36 ಪ್ರತಿನಿಧಿಗಳನ್ನು ಆರಿಸಲಾಯಿತು. ಜಿಲ್ಲೆಯ ವಿವಿಧ ಮೂಲೆಗಳಿಂದ ಬಂದ ಯುವ ಜನರ ಬೃಹತ್ ಮೆರವಣಿಗೆ ನಡೆಸಿ ಬಹಿರಂಗ ಸಭೆ ನಡೆಯಿತು. ಸುಳ್ಯದ ಕಾ|| ಸೂರ್ಯನಾರಾಯಣ ಭಟ್, ಹಾಗೂ ಡಿ.ವೈ.ಎಫ್.ಐ. ನಾಯಕರು ಮಾತನಾಡಿ ಸಂಘಟನೆ ಬಲಿಷ್ಠ ಕಟ್ಟಿ ಬೆಳೆಸಲು ಕರೆ ನೀಡಿದರು. ○

ಶಿವಮೊಗ್ಗ ಜಿಲ್ಲಾ ಸಮಾವೇಶ

ಶಿವಮೊಗ್ಗ ಜಿಲ್ಲಾ ಡಿ.ವೈ.ಎಫ್.ಐ ಸಮಾವೇಶವು ಅ.18ರಂದು ಕುಸ್ಕೂರ್ ಗ್ರಾಮದಲ್ಲಿ ಕಾ||ಶಿವಶಂಕರ್‌ರ ಧ್ವಜಾರೋಹಣದೊಂದಿಗೆ ಆರಂಭಗೊಂಡಿತು. ವಾಸುದೇವ ಕ್ರಾಂತಿಗೀತೆಹಾಡಿ ಶತೀಸ್ ಸ್ವಾಗತಿಸಿದರು. ರಾಜ್ಯ ಅಧ್ಯಕ್ಷ ಕಾ. ಮಹಾಬಲ ಬಡೇರ್‌ಹೋಬ್ಳಿ ಉದ್ಘಾಟಿಸಿ ದೇಶೂ ಸಮಗ್ರತೆ, ಛಿದ್ರಕಾರಿ ಶಕ್ತಿಗಳ ತಂತ್ರ, ಅಣುಯುದ್ಧದ ಅಪಾಯ ಯುವ ಜನತೆಯ ಸಮಸ್ಯೆ ಕುರಿತು ಮಾತನಾಡಿದರು. ಮುಖ್ಯ ಅತಿಥಿಯಾಗಿ ಮಾತನಾಡಿದ ಕಾ.ರಂಗೇಗೌಡ ಪೂಜಾರಿಯವರ ಸಾಲಮೇಳದಿಂದ ಜನತೆಯ ಸಮಸ್ಯೆ ಪರಿಹಾರ ಕಾಣುವುದಿಲ್ಲ. ಭೂಮಿ, ಉದ್ಯೋಗ, ಶಿಕ್ಷಣ, ಆರೋಗ್ಯದಂತ ಸಮಸ್ಯೆಗೆ ಮೂಲಭೂತ ಪರಿಹಾರ ಕಾಣಲು ಸಂಘಟಿತ ಹೋರಾಟ ನಡೆಸಲು ಕರೆ ನೀಡಿದರು. ರೈತ-ಕಾರ್ಮಿಕ, ನೌಕರ, ವಿದ್ಯಾರ್ಥಿ ಸಂಘಟನೆಗಳ ನಾಯಕರು ಶುಭಕೋರಿ ಮಾತನಾಡಿದರು.

ಕಾ.ಬಿ.ಎಸ್.ದಾಸ್ ಮಂಡಿಸಿದ ವರದಿಗೆ ಸಮಾವೇಶ ಅಂಗೀಕಾರ ನೀಡಿತು. ಅಣು ಯುದ್ಧದ ವಿರೋಧಿ, ಜಾತೀಯ ಮತೀಯ ಶಕ್ತಿಗಳವಿರುದ್ಧ, ಉದ್ಯೋಗ ಮೂಲಭೂತ ಹಕ್ಕಾಗಬೇಕು, ಕಂಪ್ಯೂಟರೀಕರಣ ನಿಲ್ಲಬೇಕು, ಬರಗಾಲ ಪರಿಹಾರ, ರಸ್ತೆ ರಿಪೇರಿ ಕಾರ್ಯ ಮುಂತಾದ ಬೇಡಿಕೆಗಳ ನಿರ್ಣಯ ಸ್ವೀಕರಿಸಲಾಯಿತು. ರಾಜ್ಯ ಸಮ್ಮೇಳನಕ್ಕೆ ಕಾ.ಸಂಜಯ್‌ಕುಮಾರ ಬಿ.ಎಸ್.ದಾಸ್, ಬಿ.ಎಸ್.ಸುಂದರ್ ರವರುಗಳನ್ನು ಪ್ರತಿನಿಧಿಗಳನ್ನಾಗಿ ಆಯ್ಕೆ ಮಾಡಲಾಯಿತು. ಸಮಾವೇಶದ ಅಧ್ಯಕ್ಷತೆಯನ್ನು ಕಾ.ತಿರುಕಪ್ಪನವರು ವಹಿಸಿದ್ದರು.

ಕೋಮು ಗಲಭೆಯ ಖಂಡನೆ

ಅಕ್ಟೋಬರ್ 14ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಿವಮೊಗ್ಗ ಜಿಲ್ಲಾ ಪ್ರಾದೇಶಿಕ ಸಮಿತಿ ಕೆ. ಎಂ. ಶ್ರೀನಿವಾಸ್‌ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಇತ್ತೀಚೆಗೆ ಭದ್ರಾವತಿ, ಶಿವಮೊಗ್ಗ, ತೀರ್ಥಹಳ್ಳಿಯಲ್ಲಿ ನಡೆದ ಕೋಮು ಗಲಭೆ ಕುರಿತು ಚರ್ಚಿಸಿತು.

ಈ ಗಲಭೆಯ ಹಿಂದೆ ಮತೀಯ ಮೂಲಭೂತವಾದಿಗಳ ಕೈವಾಡವಿದ್ದು ತಪ್ಪಿತಸ್ಥರ ಮೇಲೆ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದೆ.

ತೀರ್ಥಹಳ್ಳಿಯಲ್ಲಿ ಗಲಭೆಯಿಂದ ನೊಂದ ಕುಟುಂಬಕ್ಕೆ ಪರಿಹಾರ ಒದಗಿಸಬೇಕು, ಕೋಮು ಸೌಹಾರ್ದತೆಯನ್ನು ಕಾಪಾಡಬೇಕೆಂದು ಪಕ್ಷ ವಿನಂತಿಸಿದೆ.

ರಾಜೀವ್ ಧೋರಣೆಗಳ ನೆರವು

[2ನೇ ಪುಟದಿಂದ]

ವಾಗಿ ಖಂಡಿಸಿತ್ತು. ಎಲ್ಲಾ ದೇಶಪ್ರೇಮಿ ಶಕ್ತಿಗಳು ಈ ಎಚ್ಚರಿಕೆಯನ್ನು ಗಂಭೀರವಾಗಿ ತಗೊಂಡು ಈ ಆತ್ಮಹತ್ಯಾಕಾರಿ ಮಾರ್ಗ ಬಿಡುವಂತೆ ವ್ಯಾಪಕ ಪ್ರಚಾರ-ಪ್ರಕ್ಷೋಭೆ ನಡೆಸಲು ಸಾಧ್ಯವಾಗಬೇಕು. ದೇಶದ ಹಿತಾಸಕ್ತಿಗಳನ್ನು ಸಾಮ್ರಾಜ್ಯಶಾಹಿಗಳಿಗೆ ಮಾರುವ ಈ ಪ್ರಶ್ನೆಯನ್ನು ರಾಜೀವಗಾಂಧಿ ಸರ್ಕಾರವನ್ನು ಇಳಿಸಬೇಕೆನ್ನುವ ಎಲ್ಲಾ ಜಾತ್ಯಾತೀತ ಪಕ್ಷಗಳು ಮತ್ತು ಪ್ರಜಾಪ್ರಭುತ್ವವಾದೀ ಶಕ್ತಿಗಳು ಜನತೆಯ ಬಳಿ ಕೊಂಡೊಯ್ದು ಅವರನ್ನು ಜಾಗೃತಗೊಳಿಸಬೇಕು. ಸಾಮ್ರಾಜ್ಯಶಾಹೀ ತೂರಿಕೆಯ ವಿರುದ್ಧ ಸಮರ ರಾಜೀವ್ ಸರ್ಕಾರವನ್ನು ಇಳಿಸುವ ಹೋರಾಟದ ಭಾಗವಾಗಿ ನಡೆಯಬೇಕು. ○

ಭಾಷೆಯ ಬಗ್ಗೆ ಅಭಿಮಾನವೆಂಬುದು ಹೇಗಿರಬೇಕು ?

(5ನೇ ಪುಟದಿಂದ)

ಗುಂಡೂರಾಯರ ದರ್ಬಾರು

ಉದ್ಯೋಗ ಶಿಕ್ಷಣದ ಅವಕಾಶದಿಂದ ವಂಚಿತರಾದ ಜನಕ್ಕೆ ಬೆಲೆ ಏರಿಕೆ, ಜನರ ಭಾವನೆಗಳಿಗೆ ಬೆಲೆ ಕೊಡದ ಗುಂಡೂರಾಯರ ಕಾಂಗ್ರೆಸ್ ಸರ್ಕಾರದ ವಿರುದ್ಧ ಎಲ್ಲೆಡೆ ಅಸಮಧಾನ ಭುಗಿಲ್ಲೆಂದು ನಾನಾ ರೂಪದಲ್ಲಿ ಕಾರ್ಮಿಕರ ರೈತರ ಪ್ರಜಾಸತ್ತಾತ್ಮಕ ಚಳುವಳಿಗಳ ರೂಪದಲ್ಲಿ ಕಾಣಿಸಿಕೊಂಡಿತು. ಈ ಹಿನ್ನೆಲೆಯಲ್ಲಿ ಹೈಸ್ಕೂಲಿನಲ್ಲಿ ಮಾತೃಭಾಷೆಗಳನ್ನು-ಅದು ಕನ್ನಡ, ತಮಿಳು, ಉರ್ದು ಯಾವುದೇಆಗಿರಲಿ ಪ್ರಮುಖವಾಗಿ ಕಲಿಯುವ ಪದ್ಧತಿಗೆ ಬದಲಾಗಿ ಹಿಂಬಾಗಿಲಿನಿಂದ ಸಂಸ್ಕೃತವನ್ನು ತೋರಿಸುವ ಗುಂಡೂರಾವ್ ಸರ್ಕಾರದ ಪ್ರಯತ್ನದಿಂದ ಇಲ್ಲಿಯವರೆಗೂ ತಡೆಹಾಕಿದ್ದ ಅಸಮಧಾನವೆಲ್ಲಾ ಕಟ್ಟೆಹೊಡೆದು ಹೊರ ಚಿಮ್ಮಿತು. ಬಂಡವಾಳಶಾಹಿ-ಭೂಮಾಲಕ ಆಳುವ ವರ್ಗಗಳು ಪ್ರಜಾಸತ್ತಾತ್ಮಕ ಹೋರಾಟಗಳಲ್ಲಿ ಹೆಪ್ಪುಗೊಂಡು ತಮ್ಮ ವಿರುದ್ಧ ತಿರುಗುತ್ತಿದ್ದ ಜನತೆಯ ಅಸಮಾಧಾನವನ್ನು ಬೇರೆ ದಿಕ್ಕಿನತ್ತ ತಿರುಗಿಸಲು ಇದೇ ಸುಸಮಯವೆಂದು ಚಳುವಳಿಯಲ್ಲಿ ಧುಮುಕಿದುವು. ಮೊದಲು ಸಂಸ್ಕೃತದ ಯಜಮಾನಿಕೆಯ ವಿರುದ್ಧ ಎದ್ದ ಜನ ಪರಭಾವನೆಯ ಅಲೆಯನ್ನು ಇತರ ಮಾತೃ ಭಾಷೆಗಳನ್ನು ಹತ್ತಿಕ್ಕುವುದರ ದಿಕ್ಕಿನಲ್ಲಿ ತಿರುಗಿಸಲಾಯಿತು. ನಾಲ್ಕು ಹಂತಗಳಲ್ಲಿ ಬೇರೆ ಬೇರೆ ರೂಪು ತಳೆದ ಈ ಚಳುವಳಿಯ ವಿಶ್ಲೇಷಣೆ, ತಿಳುವಳಿಕೆ ಎಲ್ಲಾ ಪ್ರಜಾಸತ್ತಾತ್ಮಕ ಹೋರಾಟಗಾರರಿಗೂ ಅತ್ಯವಶ್ಯಕ ಪಾಠವಾಗಿದೆ. ಇದರ ಪ್ರತ್ಯೇಕ ವಿಶ್ಲೇಷಣೆಯನ್ನು ಇಲ್ಲಿ ಮಾಡಹೋಗುವುದಿಲ್ಲ. ಆದರೆ ಈ ಚಳುವಳಿಯ ವಿವಿಧ ಹಂತಗಳಲ್ಲಿ ಸೇರಿಕೊಂಡ ಪ್ರತಿಗಾಮಿ ಶಕ್ತಿಗಳು ಹಿಂದಿಗೂ ಕನ್ನಡಿಗರ ಪ್ರಜಾಸತ್ತಾತ್ಮಕ ಚಳುವಳಿಯನ್ನು ಇತರ ಭಾಷೆಗಳ ವಿರುದ್ಧದ ವಿಭಜಕ ಚಳುವಳಿಯಾಗಿ ತಿರುಗಿಸುತ್ತ ಶ್ರಮಿಸುತ್ತಿದ್ದಾರೆ.

ಈ ಚಳುವಳಿಯ ಕೊನೆಯ ಹಂತದಲ್ಲಿ ಚಳುವಳಿಯನ್ನು ಸೇರಿ, ತಮ್ಮ ಅಸಂಖ್ಯಾತ ಅಭಿಮಾನಿಗಳನ್ನು ಸೆಳೆದು ರಾಜಕುಮಾರ್‌ರವರಿಗೆ ಕೇವಲ ಕನ್ನಡದ ಅಭಿಮಾನ ಮಾತ್ರವಲ್ಲ ಅವರ ಚಲನ ಚಿತ್ರ ಆರ್ಥಿಕ ಲಾಭವೂ ಮುಖ್ಯವಾಗಿತ್ತೆಂಬುದನ್ನು ಗಮನಿಸಬೇಕು ರಾಜಕುಮಾರ್ ಅಭಿಮಾನಿಗಳ ಸಂಘವೊಂದೇ ಮುಂದೆ ನಿಂತು ಬೆಂಗಳೂರು ಬಂದ್ ನಡೆಸುವುದರಲ್ಲಿ ತನ್ನ ಉನ್ನತ ಘಟ್ಟವನ್ನು ಮುಟ್ಟಿದ ಈ ಚಳುವಳಿಯಿಂದ ಮುಂದೆ ರಾಜ್‌ಕುಮಾರ್‌ರವರು ಎಲ್ಲಾ ಸಂಪರ್ಕ ಕಡಿದುಕೊಂಡರೆಂಬುದನ್ನು ಗಮನಿಸಬೇಕು.

ಕಾರ್ಮಿಕರ ಜನಪರ ಚಳುವಳಿಗಳ ಅಲೆಯ ಮೇಲೆ ಅಧಿಕಾರಕ್ಕೆ ಬಂದ ಜನತಾ ಸರ್ಕಾರ ಈ ಚಳುವಳಿಗಳ ಪ್ರಜಾಸತ್ತಾತ್ಮಕ ಬೇಡಿಕೆಗಳನ್ನು ಈಡೇರಿಸಿ ಪ್ರಜಾಸತ್ತಾತ್ಮಕ ಚಳುವಳಿಯನ್ನು ದೃಢಗೊಳಿಸಿ ತಾನೂ ಬೆಳೆಯಬಹುದಾಗಿತ್ತು. ಆದರೆ ತನ್ನ ಬಂಡವಾಳಶಾಹಿ-ಭೂಮಾಲಕ ವರ್ಗ ಹಿತಾಸಕ್ತಿಗಳಿಗೆ ವಿರುದ್ಧವಾದ ಈ ಜನಪರ ಬೇಡಿಕೆಗಳನ್ನು ಈಡೇರಿಸದಿದ್ದರೆ ಅವರ ಗತಿ ಏನು ? ಆದುದರಿಂದ ಅಗ್ಗದ ಜನಪ್ರಿಯತೆ ಪಡೆಯಲು ರಾಜಕುಮಾರ್ ಅಭಿಮಾನಿ ಸಂಘದ ಅವರ ಜೊತೆಗಾರರ ಹೋರಾಟವನ್ನು ಮೇಲು ನೋಟಕ್ಕೆ ವಿರೋಧಿಸಿದಂತೆ ಕಂಡು ಬಂದರೂ ಅವರ ಬೇಡಿಕೆಗಳನ್ನು-ಕನ್ನಡಿಗರನ್ನು ಇತರ ಭಾಷಾ ಅಲ್ಪ ಸಂಖ್ಯಾತರ ವಿರುದ್ಧ ಎತ್ತಿಕಟ್ಟುವ ಬೇಡಿಕೆಗಳನ್ನು-ಮಾತ್ರ ತನ್ನದೇ ಕಾರ್ಯಕ್ರಮವಾಗಿ ಅಂಗೀಕರಿಸಿದೆ. ಸರೋಜಿನಿ ಮಹಿಷಿಯವರ ಉದ್ಯೋಗ ಸಮಿತಿ, ಪಾಟೀಲ್ ಪುಟ್ಟಪ್ಪನವರ ಕನ್ನಡ ಕಾವಲು ಸಮಿತಿಗಳು ಇದಕ್ಕೆ ಜ್ವಲಂತ ಉದಾಹರಣೆಗಳು.

ಕನ್ನಡವನ್ನು ಆಡಳಿತ ಭಾಷೆಯಾಗಿ, ನ್ಯಾಯಾಂಗದ ಭಾಷೆಯಾಗಿ ಮಾಡದೆ, ಸರ್ಕಾರಿ, ಖಾಸಗೀ, ಉದ್ಯಮಗಳಲ್ಲಿ ಕನ್ನಡ ಭಾಷೆಯ ವ್ಯವಹಾರವನ್ನು ನಡೆಸಲು ಪ್ರಯತ್ನಿಸದೆ ಇರುವುದರ ಅರ್ಥವೇನು? ಕನ್ನಡಕಲಿತವರಿಗೆ ಉನ್ನತವಿದ್ಯಾಭ್ಯಾಸ ಮಾಡಲು, ಉದ್ಯೋಗ ಪಡೆಯಲು ಇಂಗ್ಲಿಷ್ ಮಾಧ್ಯಮ ಶಾಲೆಗಳತ್ತ ತಳ್ಳುತ್ತೇವೆ. ಅಲ್ಲಿ ಕನ್ನಡಿಗರು ಇಂಗ್ಲಿಷ್ ಕಲಿಯಲಿ ಆದರೆ ಭಾಷಾಅಲ್ಪಸಂಖ್ಯಾತರು-ತಮಿಳರು, ಮಲೆಯಾಳಿಗಳು ಯಾಕೆ ಅವರ ಮಾತೃ ಭಾಷೆಯನ್ನು ಪ್ರೀತಿಸಬೇಕು, ಅದರಲ್ಲಿಯೇ ವ್ಯವಹರಿಸಬೇಕು? ಅದು ಕೂಡದು ನೀವು ನಮ್ಮಂತೆ ಪರಭಾಷೆಯನ್ನು ಕನ್ನಡವನ್ನು ಕಲಿಯಿರಿಎಂದು ಅವರ ಮೇಲೆ ಕನ್ನಡವನ್ನು ಒತ್ತಾಯದಿಂದ ಹೇರಲಾಗುತ್ತಿದೆ. ಇದರ ಅರ್ಥ ಇಷ್ಟೇ! ಕನ್ನಡಿಗರಿಗೆ ನೌಕರಿಯನ್ನು ಒದಗಿಸಲು ನಾವು ಅಶಕ್ತರು ಆದುದರಿಂದ ನೀವು ಇಲ್ಲಿ ನೆಮ್ಮದಿಯಿಂದ ಉಸಿರಾಡಲಾಗದಂತೆ ಮಾಡಿ ಹೊರದಬ್ಬಲು ಪ್ರಯತ್ನಿಸುತ್ತೇವೆ. ಆದರಿಂದ ನಮ್ಮ ಅಸಾಮರ್ಥ್ಯ ಮರೆಮಾಚಲು ಸಾಧ್ಯವೋ ನೋಡುತ್ತೇವೆ ಎಂದು.

ಇಂತಹ ಪ್ರಯತ್ನವನ್ನು ಜನತೆಯ ಒಗ್ಗಟ್ಟನ್ನೊಡೆಯುವ ಈ ಪ್ರಯತ್ನವನ್ನು ಕಾರ್ಮಿಕ ವರ್ಗ ದೃಢತೆಯಿಂದ ಎದುರಿಸಬೇಕು. ರಾಜ್ಯದಲ್ಲಿ ಕನ್ನಡ ಆಡಳಿತಭಾಷೆಯಾಗುವುದು ಉನ್ನತ ಶಿಕ್ಷಣದ ಭಾಷೆಯಾಗುವುದುನ್ಯಾಯಾಂಗದ ಭಾಷೆಉನ್ನತ ಹುದ್ದೆಗಳಪರೀಕ್ಷೆಯ ಭಾಷೆಯಾಗುವುದು, ಆಕಾಶವಾಣಿ ದೂರದರ್ಶನಗಳ ಭಾಷೆಯಾಗುವುದು ತಮಗೆ ಬೇಕಾಗಿದೆ. ಜನರು ಕನ್ನಡವನ್ನು ಕಲಿಯುವುದಕ್ಕೆ, ಕನ್ನಡದ ಮೂಲಕವೇ ಜಗತ್ತಿನ ಎಲ್ಲಾ ಜ್ಞಾನ ಸಂಪತ್ತನ್ನು ತಮ್ಮದಾಗಿಸಿಕೊಳ್ಳುವುದಕ್ಕೆ ಸಾಧ್ಯವಾಗುವ ಪರಿಸ್ಥಿತಿಯನ್ನು ನೀವು ಕಲ್ಪಿಸಿಕೊಡಿ. ಆಗ ಕನ್ನಡಿಗರೆಲ್ಲರೂ ಕನ್ನಡ ಕಲಿಯುತ್ತಾರೆ. ಒಗ್ಗಟ್ಟಾಗಿ ಬಾಳುತ್ತಾರೆ. ಆದರೆ ತಮಿಳು, ಮಲೆಯಾಳಿಗಳಿಗೆ ಕನ್ನಡವನ್ನು ಹೇರಲು ಹೋಗಬೇಡಿ. ಸುತ್ತಮುತ್ತ ವ್ಯವಹಾರವೆಲ್ಲವೂ ಕನ್ನಡವಾದರೆ ಅವರು ತಾವಾಗಿಯೇ ಕನ್ನಡ ಕಲಿಯುವ ಅನಿವಾರ್ಯ ನಿರ್ಬಂಧಕ್ಕೆ ಒಳಗಾಗುತ್ತಾರೆ.

ಎಲ್ಲಿಯವರೆಗೂ ನೀವು ಇಂಗ್ಲಿಷಿನಲ್ಲಿಯೇ ಎಲ್ಲವನ್ನು ನಡೆಸುತ್ತಿರೋ ಅಲ್ಲಿಯವರಿಗೂತಮಿಳರು, ಮಲೆಯಾಳಿಗಳು ಮಾತ್ರವಲ್ಲ-ಕನ್ನಡಿಗರು ಕನ್ನಡ ಕಲಿಯುವುದಿಲ್ಲ ಎಂದು ಹೇಳಬೇಕಾಗಿದೆ. ಕನ್ನಡ ಭಾಷೆಯ ಉಳಿವಿಗೆ, ಬೆಳವಿಗೆ ದುಡಿಯ ಬೇಕಾಗಿದೆ. ತಮಿಳರ, ಮಲೆಯಾಳಿಗಳ, ಉರ್ದು ಭಾಷಿಕರ ವಿರುದ್ಧ ತಿರುಗದೆ ಕನ್ನಡ ಪ್ರೇಮ ನಮ್ಮದಾಗ ಬೇಕಾಗಿದೆ. ಅದೇ ನಿಜವಾದ ಕನ್ನಡ ಅಭಿಮಾನ. ○

'ಕಾರ್ಯಕಾರಿ ಸಭೆ ದೆಹಲಿಯಲ್ಲಿ'

ಎಸ್.ಎಫ್.ಐ. ಕೇಂದ್ರ ಕಾರ್ಯಕಾರೀ ಸಭೆಯನ್ನು ಡಿಸೆಂಬರ್ 9 ರಂದು 'ದೆಹಲಿ ರ್‍ಯಾಲಿ'ಯ ಪ್ರಯುಕ್ತ ದೆಹಲಿಯಲ್ಲಿಯೇ ನಡೆಸಲು ಉದ್ದೇಶಿಸಲಾಗಿದೆ. ಈ ಹಿಂದೆ ಬೆಂಗಳೂರಿನಲ್ಲಿ ನಡೆಸಲಾಗುವುದೆಂದು ನಿರ್ಧರಿಸಲಾಗಿತ್ತು. ಈ ಬದಲಾವಣೆಯನ್ನು ಎಸ್.ಎಫ್.ಐ. ಎಲ್ಲಾ ಶಾಖೆಗಳು ಗಮನಿಸ ಬೇಕಾಗಿ ರಾಜ್ಯ ಕಾರ್ಯದರ್ಶಿ ಕಾ||ಎಸ್.ಆರ್ ಆರಾಧ್ಯ ವಿನಂತಿಸಿದ್ದಾರೆ.

ಥ್ಯಾಚರ್ ಸರ್ಕಾರ ಮತ್ತೆ ರಾಜಕೀಯ ಆಪತ್ತಿನಲ್ಲಿ

ಕಾಮನ್ವೆಲ್ತ್ ಸಭೆಯ ಕಲಾಪಗಳಲ್ಲಿ ತನ್ನ ವರ್ತನೆಗಳ ಮೂಲಕ ದಕ್ಷಿಣ ಆಫ್ರಿಕಾದ ದುಷ್ಟ, ಅಮಾನವೀಯ ವರ್ಣಭೇದ ನೀತಿಗೆ ಪರೋಕ್ಷ ಬೆಂಬಲ ನೀಡಿ ಜಾಗತಿಕ ಖಂಡನೆಗೊಳಗಾದ ಮಾರ್ಗರೆಟ್ ಥ್ಯಾಚರ್‌ರ ಬ್ರಿಟಿಶ್ ಸಂಪ್ರದಾಯ ಶರಣ ಸರ್ಕಾರದ ಇನ್ನೊಂದು ದುಷ್ಟವರ್ತನೆ ಈಗ ಬಯಲಾಗಿದೆ. ಇದರಿಂದಾಗಿ ಥ್ಯಾಚರ್ ಸರ್ಕಾರ ಮತ್ತೆ ಆಪತ್ತಿನಲ್ಲಿ ತನ್ನನ್ನು ತಾನೇ ಸಿಲುಕಿಸಿಕೊಂಡಿದೆ.

ಆಫ್ರಿಕಾ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷ ಆಲಿವರ್ ತಾಂಬೋ ಹಾಗೂ ಇತರ ಪ್ರಮುಖ ಎ.ಎನ್.ಸಿ.ಮುಖಂಡರನ್ನು ಲಂಡನ್‌ನಲ್ಲಿ ಅಪಹರಿಸುವ ಪಿತೂರಿ ನಡೆಸಿದ ಆಪಾದನೆಯ ಮೇಲೆ ಕಳೆದ ಜುಲೈನಲ್ಲಿ ಲಾರ್ಸೆನ್, ವೀಟ್ಲೆ ಮತ್ತು ಈವಾನ್ಸ್‌ಎಂಬ ಮೂವರನ್ನು ಭಯೋತ್ಪಾದಕತೆ ನಿವಾರಣಾ ಶಾಸನದ ಪ್ರಕಾರ ಬಂಧಿಸಿ ವಿಚಾರಣೆಗೊಳಪಡಿಸಲಾಗಿತ್ತು. ಕೆಲವೇ ದಿನಗಳ ಹಿಂದೆಯಷ್ಟೆ ಈ ಮೂವರ ವಿರುದ್ಧ ಷಡ್ಯಂತ್ರದ ಮಜಬೂತಾದ ಪುರಾವೆಗಳಿವೆ ಎಂದು ನ್ಯಾಯಾಲಯದಲ್ಲಿ ಹೇಳಿದ್ದ ಸರ್ಕಾರಿ ವಕೀಲರು ಇದ್ದಕ್ಕಿದ್ದಂತೆ ಕಳೆದವಾರ ಈ ದಾವೆಯನ್ನು ಕೈಬಿಡಬೇಕೆಂದು ನ್ಯಾಯಾಲಯವನ್ನು ಕೋರಿದರು. ಇದಕ್ಕೆ ಕೆಲವೇ ಕ್ಷಣಗಳ ಮೊದಲು ವಿಚಾರಣೆಯನ್ನು ಗುಪ್ತವಾಗಿ ನಡೆಸುವುದಾಗಿ ನ್ಯಾಯಾಲಯ ಹೇಳಿತ್ತು.

ಈ ಪಿತೂರಿಯಲ್ಲಿ ಬ್ರಿಟನ್ ಸರ್ಕಾರದ ಕೈವಾಡವೂ ಇರುವುದೇ ಇದಕ್ಕೆ ಕಾರಣವೆಂದು ಹೇಳಲಾಗುತ್ತಿದೆ. ಲಾರ್ಸೆನ್ ಎಂಬಾತ ಬ್ರಿಟಿಶ್ ಗುಪ್ತಚಾರ ಇಲಾಖೆಗಾಗಿ ಕೆಲಸ ಮಾಡುತ್ತಿದ್ದು ಬ್ರಿಟಿಷ್ ಹಾಗೂ ದಕ್ಷಿಣ ಆಫ್ರಿಕಾದ ಗುಪ್ತಚಾರ ಇಲಾಖೆಗಳು ಪರಸ್ಪರ ಸಹಕರಿಸುತ್ತಿದ್ದುದರ ದಾಖಲೆಗಳು ಆಪಾದಿತರ ಬಳಿ ದೊರೆತಿದ್ದವು ಎಂದು ತಿಳಿದುಬಂದಿದೆ. ಲಾರ್ಸೆನ್ ಮೊದಲು ರೊಡೇಶ್ಯಾ (ಈಗ ಜಿಂಬಾಬ್ವೆ ಬಿಳಿಯರ ಸರ್ಕಾರದ ಗುಪ್ತಚಾರ ಇಲಾಖೆಯಲ್ಲೂ ಇದ್ದ ಹಾಗೂ ಅಮೆರಿಕಾದ ಬಲಪಂಥೀಯರೊಡನೆ ಈತನಿಗೆ ನಿಕಟ ಸಂಪರ್ಕವಿದೆ ಎಂದೂ ತಿಳಿದು ಬಂದಿದೆ.

ವರ್ಣಭೇದ ನೀತಿಯ ವಿರೋಧಿಗಳನ್ನು ಮುಗಿಸಿಬಿಡಲು ದ. ಆಫ್ರಿಕಾ ಬಿಳಿಯ ಸರ್ಕಾರ ಮೊದಲಿನಿಂದಲೂ ಪ್ರಯತ್ನಿಸುತ್ತಾ ಬಂದಿದೆ. ಇಂತಹ ಜಘನ್ಯ ಕೃತ್ಯದಲ್ಲಿ ಪಾಲುಗೊಳ್ಳಲೂ ಕೂಡಾ ಥ್ಯಾಚರ್ ಹೇಸುವುದಿಲ್ಲ ಎಂಬುದು ಈಗ ಎಲ್ಲರಿಗೂ ತಿಳಿದಂತಾಗಿದೆ.

ಸಂಕ್ಷಿಪ್ತ ಸುದ್ದಿಗಳು

ಶೇರು ಮಾರ್ಕೆಟ್ ಕುಸಿತ:ರೇಗನಾಮಿಕ್ಸ್ ಸ್ಫೋಟ

1929ರ ತೀವ್ರ ಆರ್ಥಿಕ ಬಿಕ್ಕಟ್ಟಿನ ನಂತರ ಮೊತ್ತ ಮೊದಲ ಬಾರಿಗೆ ಅಮೆರಿಕಾ, ಯೂರೋಪು ಹಾಗೂ ಜಪಾನಿನ ಶೇರುಮಾರ್ಕೆಟುಗಳಲ್ಲಿ ಭಾರೀ ಕುಸಿತ ಕಂಡು ಬಂದಿದ್ದು ಸಮಸ್ತ ಬಂಡವಾಳಶಾಹೀ ಜಗತ್ತು ತೀವ್ರ ಆರ್ಥಿಕ ಹಿಂಜರಿತದಲ್ಲಿ ಸಿಲುಕಿಕೊಳ್ಳಲಿದೆ. ಎಂಬ ಭಯ ಎಲ್ಲಾ ಬಂಡವಾಳಶಾಹೀ ಮಾರುಕಟ್ಟೆಗಳನ್ನು ಆವರಿಸಿದೆ. ಇದಕ್ಕೆ ರೇಗನ್‌ರ ವರ್ಷಕ್ಕೆ 200ಶತಕೋಟಿ ಡಾಲರುಗಳ ಕೊರತೆ ಬಜೆಟ್‌ಗಳೇ ಕಾರಣ ಎಂದು 'ವಾಶಿಂಗ್ಟನ್ ಪೋಸ್ಟ್' ತಿಳಿಸಿದೆ. ಶಸ್ತ್ರಾಸ್ತ್ರ ಪೈಪೋಟಿಗಾಗಿ ಭೌತಿಕ ಹಾಗೂ ಆರ್ಥಿಕ ಸಂಪನ್ಮೂಲಗಳನ್ನು ಸೂರೆಗೊಳ್ಳುತ್ತಿರುವ ರೇಗನ್ ನೀತಿಯ ದುಷ್ಫಲವೇ ಈ ಕುಸಿತ ಎಂದು ಸೋವಿಯೆತ್ ವಾರ್ತಾ ಸಂಸ್ಥೆ ಟಾಸ್ ಹೇಳಿದೆ. ಇದನ್ನು ಮರೆಮಾಡಲು ರೇಗನ್ ದಿನಕ್ಕೊಂದು ತಿಪ್ಪರಲಾಗ ಹಾಕಿ ನಗೆ ಪಾಟಲಾಗುತ್ತಿದ್ದಾರೆ.

ಆಫ್ರಿಕನ್ ದೇಶಗಳನ್ನು ಇರಿಯುತ್ತಿರುವ ಸಾಲದ ಶೂಲ

ಆಫ್ರಿಕನ್ ದೇಶಗಳು ತಾವು ಐ.ಎಂ.ಎಫ್.ನಿಂದ ಪಡೆದ ಸಾಲದ ಮೂರರಷ್ಟನ್ನು ಮರುಪಾವತಿ ಮಾಡಿವೆ. ಆದರೂ ಇನ್ನೂರು ಶತಕೋಟಿ ಡಾಲರುಗಳ ಸಾಲದ ಹೊರೆ ಅವುಗಳ ಮೇಲಿದೆ. ವಿಶ್ವಸಂಸ್ಥೆಯ ಒಂದು ವರದಿ ಇದನ್ನು ತಿಳಿಸಿದೆ. ಕಳೆದ ಒಂದೇ ವರ್ಷದಲ್ಲಿ ಈ ದೇಶಗಳು ವಿದೇಶ ವಿನಿಮಯ 19 ಶತಕೋಟಿ ಡಾಲರುಗಳನ್ನು ಕಳೆದುಕೊಳ್ಳ ಬೇಕಾಗಿ ಬಂದಿದೆ.

ಮಧ್ಯ ಅಮೆರಿಕಾದಲ್ಲಿ ಶಾಂತಿ ಯತ್ನಗಳು

ಆಗಸ್ಟ 7 ರಂದು ಐದು ಮಧ್ಯಅಮೆರಿಕಾ ದೇಶಗಳು ವಾಶಿಂಗ್ಟನ್‌ನ ಒತ್ತಡಗಳನ್ನು ನಿರ್ಲಕ್ಷಿಸಿ ತಮ್ಮ ಕ್ಷೇತ್ರದಲ್ಲಿ ಶಾಂತಿ ಸ್ಥಾಪನೆಗಾಗಿ ಒಪ್ಪಂದವನ್ನು ಮಾಡಿಕೊಂಡ ಮೂರೇ ದಿನಗಳೊಳಗೆ ನಿಕಾರಗುವಾ ಸರಿ ಹೊಂದಾಣಿಕೆಯ ರಾಷ್ಟ್ರೀಯ ಆಯೋಗವನ್ನು ರಚಿಸಿ ಶಾಂತಿ ಪ್ರಯತ್ನಗಳನ್ನು ನಿರ್ಧಾರಿತ ಸಮಯದ ಮೊದಲೇ ಆರಂಭಿಸಿದೆ. ಈಗಾಗಲೇ ಶಸ್ತ್ರತ್ಯಾಗ ಮಾಡಿದ ಕೂಲಿ ಸೈನಿಕರನ್ನು ಎದುರುಗೊಳ್ಳಲು ಹೊಸ ಕಚೇರಿಗಳನ್ನು ತೆರೆಯಲಾಗಿದೆ. ವಾರಕ್ಕೊಮ್ಮೆ ಹೊಂಡುರಾಸ್ ಜತೆ ಗಡಿಗಳನ್ನು ತೆರೆದು ಹಲವಾರು ಕುಟುಂಬಗಳ ಸದಸ್ಯರು ಪರಸ್ಪರ ಸೇರಲು ಅವಕಾಶ ನೀಡಲಾಗಿದೆ. ನಿಕಾರಗುವಾದ ರಾಷ್ಟ್ರೀಯ ಅಸೆಂಬ್ಲಿ ಕ್ಷಮಾದಾನ ನೀಡಿದ 16 ಮಧ್ಯ ಅಮೇರಿಕನ್ ನಾಗರಿಕರನ್ನು ಬಿಡುಗಡೆ ಮಾಡಲಾಗಿದೆ.

ಪರಮಾಣು ನಿರ್ಬಂಧಕ್ಕೆ ಗೊರ್ಬಚೆವ್ ಪ್ರಸ್ತಾಪ

ನವಂಬರ್ 1 ರಿಂದ ಮಧ್ಯಮ ಹಾಗೂ ಸಮೀಪಗಾಮಿ ಪರಮಾಣು ಕ್ಷಿಪಣಿಗಳ ಉತ್ಪಾದನೆ, ಪರೀಕ್ಷಣೆ ಹಾಗೂ ನೆಲೆಗೊಳಿಸುವಿಕೆಯ ಮೇಲೆ ನಿರ್ಬಂಧ ಘೋಷಿಸಬೇಕೆಂದು ಸೋವಿಯತ್ ಮುಖಂಡ ಗೊರ್ಬಚೆವ್ ಹೊಸ ನಿಶ್ಶಸ್ತ್ರೀಕರಣ ಪ್ರಸ್ತಾಪ ಮಂಡಿಸಿದ್ದಾರೆ. ಕಳೆದವಾರ ಮಾಸ್ಕೋಗೆ ಭೇಟಿ ನೀಡಿದ್ದ ಅಮೆರಿಕನ್ ವಿದೇಶಾಂಗ ಕಾರ್ಯದರ್ಶಿ ಜಾರ್ಜ್ ಶೂಲ್ಟ್‌ಜರವರಿಗೆ ಇದನ್ನು ಅವರು ತಿಳಿಸಿದ್ದಾರೆ. ಗೊರ್ಬಚೇವ್ ಹಾಗೂ ರೇಗನ್‌ರ ಶೃಂಗ ಸಭೆ ಕುರಿತು ಮಾತನಾಡಲು ಬಂದಿದ್ದ ಶೂಲ್ಟ್‌ಜ ತನ್ನ ಕೆಲಸ ಯಶಸ್ವಿಯಾಗಲಿಲ್ಲವೆಂದು ತಿಳಿಸಿದ ಪತ್ರಿಕಾ ಸಮ್ಮೇಳನದಲ್ಲಿ ಈ ಬಗ್ಗೆ ಚಕಾರವನ್ನು ಎತ್ತಲಿಲ್ಲ ಎಂದು ತಿಳಿದುಬಂದಿದೆ. ತಾರಾಸಮರದ ಬಗ್ಗೆ ಎಂದೂ ಯಾವ ಮಾತುಕತೆಯೂ ಸಾಧ್ಯವಿಲ್ಲ ಎಂಬ ಹಾಗೂ 1972ರ ಪ್ರಕ್ಷೇಪಕಾಸ್ತ್ರ ಸರೋಧಕ ಸಂಧಿಯನ್ನು ತನಗೆ ಅನುಕೂಲವಾಗುವಂತೆ ವಿರೂಪಗೊಳಿಸುವ ರೇಗನ್ ಹಠಮಾರಿತನದಿಂದಾಗಿ ಶೃಂಗ ಸಭೆಯ ಬಗ್ಗೆ ನಿರ್ಧಾರಕ್ಕೆ ಬರುವುದು ವಿಳಂಬವಾಗುತ್ತಿದೆ ಎಂಬುದನ್ನು ಪರೋಕ್ಷವಾಗಿಯಾದರೂ ಶೂಲ್ಟ್‌ಜ ಈ ಪತ್ರಿಕಾಗೋಷ್ಠಿಯಲ್ಲಿ ಒಪ್ಪಿಕೊಳ್ಳಬೇಕಾಯಿತು.

ಇದೇ ಸಮಯದಲ್ಲಿ ಅತ್ತ ಅಮೆರಿಕಾ ಈ ಶತಮಾನದ ಅಂತ್ಯದೊಳಗಂತೂ ಪರಮಾಣು ಅಸ್ತ್ರಗಳ ಪರೀಕ್ಷಣೆಗಳನ್ನು ನಿಲ್ಲಿಸುವುದಿಲ್ಲವೆಂದೂ, ಮಾತುಕತೆಗಳು ನಡೆಯುತ್ತವಷ್ಟೇ, ಒಪ್ಪಂದಗಳಾಗುವುದಿಲ್ಲವೆಂದು ವಾಶಿಂಗ್ಟನ್‌ನಲ್ಲಿ ಸರ್ಕಾರಿ ವಕ್ತಾರರು ಹೇಳಿರುವುದಾಗಿ ವರದಿಯಾಗಿದೆ !

ಪ. ಬಂಗಾಳ : ವಿಧಾನ ಸಭೆಯಲ್ಲಿ ಕಾಂಗ್ರೆ ಗಲಭೆ

ಕಾಳಸಂತೆ ವ್ಯಾಪಾರಿಗಳನ್ನು ನಿಗ್ರಹಿಸುವ ಕುರಿತಾದ ಪ್ರಕಟನೆಯೊಂದನ್ನು ಪ.ಬಂಗಾಳದ ಆಹಾರ ಮಂತ್ರಿ ನಿರ್ಮಲ್‌ಭೋಸ್ ವಿಧಾನಸಭೆಯಲ್ಲಿ ಓದಲು ಎದ್ದು ನಿಂತಾಗ ಕಾಂಗ್ರೆ ಸದಸ್ಯರೂ ಇದರಿಂದ ಕೋಪೋದ್ರಿಕ್ತರಾಗಿ ಸಚಿವರ ಮೇಲೆಆಕ್ರಮಣ ನಡೆಸಿದರು. ಇದನ್ನು ತಡೆಯಲು ಯತ್ನಿಸಿದ ಸಿ.ಪಿ.ಐ.(ಎಂ) ಶಾಸಕರ ಮೇಲೆ ಕೈ ಮಾಡಿ ಗಾಯಗೊಳಿಸಿದರು.

ಎಳ್ಳೆಣ್ಣೆ ಮತ್ತು ಸಾಸಿವೆಎಣ್ಣೆಗಳ ಅಕ್ರಮ ದಾಸ್ತಾನಿಗೆ ಸಂಬಂಧಿಸಿದಂತೆ ಆಹಾರ ಸಚಿವರು ಪ್ರಕಟನೆಯೊಂದನ್ನು ಮಂಡಿಸಲು ಯತ್ನಿಸಿದಾಗ ಅದನ್ನು ತಡೆಯುವ ಸಲುವಾಗಿ ಕಾಂಗ್ರೆಸ್(ಐ) ಶಾಸಕರಾದ ಸುಬ್ರತಾ ಮುಖರ್ಜಿ, ಗೋವಿಂದನಸ್ಕರ್, ಸುಲ್ತಾನ್‌ಅಹಮದ್ ಮುಂತಾದವರು ಕೂಗಾಡಿ ಕಲಾಪವನ್ನು ಅಸ್ತವ್ಯಸ್ತಗೊಳಿಸಿದರು. ನಂತರ ಇದ್ದಕ್ಕಿದ್ದಂತೆ ಸಚಿವರತ್ತ ಧಾವಿಸಿ ಅವರ ಮೇಲೆ ಹಲ್ಲೆ ನಡೆಸಿ ಅವರ ಕೈಲಿದ್ದ ಪ್ರಕಟನೆಯ ಪ್ರತಿಯನ್ನು ಕಿತ್ತುಕೊಳ್ಳಲು ಪ್ರಯತ್ನಿಸಿದರು. ಸಚಿವರ ರಕ್ಷಣೆಗೆ ಧಾವಿಸಿದ ಸಿ.ಪಿ.ಐ.(ಎಂ) ಶಾಸಕರನ್ನು ಇನ್ನಿತರ ಕಾಂಗ್ರೆ ಶಾಸಕರು ತಡೆದು ಹಲ್ಲೆ ನಡೆಸಿದರು. ಕುರ್ಚಿಗಳನ್ನು ಬಿಸಾಡಿ ಮುರಿದರು, ಧ್ವನಿವರ್ಧಕಗಳನ್ನು ಕಿತ್ತರು. ಈ ಹಲ್ಲೆಯಲ್ಲಿ ಒಂಕ್ಷಿ ಗೋಪಾಲ್ ಚೌಧರಿ, ಅಂಜನಚಟರ್ಜಿ, ಸಚ್ಚಿನ್ ಹಲ್ದಾರ್ ಮುಂತಾದ ಸಿ.ಪಿ.ಐ.(ಎಂ) ಶಾಸಕರು ಗಾಯಗೊಂಡರು. ಈ ಘಟನೆಯಿಂದಾಗಿ ಸಭಾಧ್ಯಕ್ಷರುಸಭೆಯನ್ನು 30 ನಿಮಿಷಗಳ ಕಾಲ ಮುಂದೂಡಿದರು. ಅನಂತರಸಭೆ ಪ್ರಾರಂಭಗೊಂಡ ಮೇಲೆ ಸಚಿವ ನಿರ್ಮಲ್‌ಭೋಸ್ ಅವರು ಕಾಂಗ್ರೆ ಶಾಸಕರ ವರ್ತನೆಯ ಬಗ್ಗೆ ತಮ್ಮ ಆಶ್ಚರ್ಯ ವ್ಯಕ್ತಪಡಿಸಿ ತಾವು ಓದುತ್ತಿದ್ದ ಪ್ರಕಟನೆಯಲ್ಲಿ ಕೇಂದ್ರ ಸರ್ಕಾರವು ಎಳ್ಳೆಣೆ ಮತ್ತು ಸಾಸಿವೆಎಣ್ಣೆಯನ್ನು ಸರಬರಾಜು ಮಾಡದವಿವರಗಳು ಪ್ರಸುತ್ತ ಉಂಟಾಗಿರುವ ಅಭಾವ ಪರಿಸ್ಥಿತಿ,ಮತ್ತು ಕಾಳಸಂತೆ ವ್ಯಾಪಾರಿಗಳು ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಜನತೆಯನ್ನು ಸುಲಿಗೆ ಮಾಡುತ್ತಿರುವುದನ್ನು ಖಂಡಿಸುವ ವಿಷಯಗಳನ್ನಷ್ಟೇಒಳಗೊಂಡಿದ್ದಿತೆಂದೂ ತಿಳಿಸಿದರು. ಕಾಂಗ್ರೆ ಪಕ್ಷ ಯಾರ ಪರವಾಗಿದೆಯೆಂಬುದು ಈ ಘಟನೆಯಿಂದ ಗೊತ್ತಾಗುತ್ತದೆಯಲ್ಲವೇ? ○

ಕೇರಳ : ಕರುಣಾಕರನ್ ಆಡಳಿತ ಪೊಲೀಸರನ್ನು ಸಮಾಜ ವಿರೋಧಿಗಳನ್ನಾಗಿ ಮಾಡಿತು

ಕೇರಳದಲ್ಲಿ ಇಂದಿರಾ ಕಾಂಗ್ರೆಸ್ ಆಡಳಿತದಲ್ಲಿದ್ದಾಗ 1986ರ ಅಕ್ಟೋಬರ್ 22ರಂದು ತಂಗಮಣಿ ಎಂಬ ಗ್ರಾಮದಲ್ಲಿ ಪೊಲೀಸರು ನಡೆಸಿದ ಸಮಾಜದ್ರೋಹಿ ಕೃತ್ಯಗಳ ಬಗ್ಗೆ ಶ್ರೀದೇವಿ ಆಯೋಗವು ವಿಚಾರಣೆ ನಡೆಸಿ ಪೊಲೀಸರು ಆ ಗ್ರಾಮದ ಮೇಲೆ ಎರಗಿ ಮಾನಭಂಗ, ಸುಲಿಗೆ, ಕಳ್ಳತನಗಳನ್ನು ನಡೆಸಿದ್ದಾರೆಂದು ವರದಿ ಪ್ರಕಟಿಸಿದೆ.ಆಯೋಗವು ಇತ್ತೀಚೆಗೆ ತನ್ನ ಪ್ರಕಟನೆಯನ್ನು ಮುಂದಿಟ್ಟಿತು. ಪೋಲೀಸರ ಅರಾಜಕತೆಯನ್ನು ನಿರೂಪಿಸುವ ಧ್ವನಿ ಮುದ್ರಿತ ಟೇಪ್ ಅನ್ನು ಸಮರ್ಪಿಸಿತು. ಪೊಲೀಸರ ಈ ಕ್ರಮವನ್ನು ಆಯೋಗವು ಕಾನೂನು ವಿರೋಧಿಯೆಂದು ಹೇಳಿದೆ. ಪೋಲೀಸರು ಅನೇಕ ಅಪರಾಧಗಳನ್ನು ಎಸಗಿದ್ದಾರೆ; ಮನೆಗಳನ್ನು ಕಟ್ಟಡಗಳನ್ನು ನಾಶಪಡಿಸಿದ್ದಾರೆ, ಹೆಂಗಸರನ್ನು ಮಾನಭಂಗ ಮಾಡಿದ್ದಾರೆ,ಮನೆಮನೆಗೆ ನುಗ್ಗಿ ದರೋಡೆ ನಡೆಸಿದ್ದಾರೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ನಾಲ್ವರು ಹೆಣ್ಣು ಮಕ್ಕಳು ಅಂದಿನ ಘಟನೆಯನ್ನು ವಿವರಿಸಿದ ಧ್ವನಿಮುದ್ರಿತ ಕ್ಯಾಸೆಟ್ಟುಗಳನ್ನು ಪತ್ರಕರ್ತರೊಬ್ಬರು ನೀಡಿದ ಎರಡು ಕ್ಯಾಸೆಟ್‌ಗಳನ್ನು ರಾಜ್ಯ ಸರ್ಕಾರದ ಒಳಾಡಳಿತ ಇಲಾಖೆಯ ಕಾರ್ಯದರ್ಶಿಗಳಿಗೆ ಆಯೋಗ ಒಪ್ಪಿಸಿತು. ಘಟನೆ ರಾತ್ರಿಯ ವೇಳೆ ನಡೆದಿದ್ದು ಬಲಾತ್ಕಾರಕ್ಕೆ ಬಲಿಯಾದ ಮಹಿಳೆಯರು ಪೊಲೀಸರನ್ನು ಗುರುತಿಸಲಾಗಿಲ್ಲ. ಆದರೆ ಪೊಲೀಸ್ ಸೂಪರಿಂಟೆಂಡೆಂಟ್ ಪುಲಿಕೇಶಿ, 130 ಪೊಲೀಸ್ ಅಧಿಕಾರಿಗಳು ಸರ್ಕಲ್ ಇನ್ಸ್‌ಪೆಕ್ಟರುಗಳಾದ ಸಿ.ಪಿ.ತಾಂಬನ್, ಅಹಮದ್‌ಕುಂಜು ಮುಂತಾದವರು ಅಪರಾಧಗಳನ್ನು ಎಸಗಿದ್ದಾರೆಂದು ಆಯೋಗ ತಿಳಿಸಿದೆ. ●

ತ್ರಿಪುರ : ಬಿ. ಜೆ. ಪಿ. ಮಿಥ್ಯಾರೋಪ

ತ್ರಿಪುರಾದ ಸಿ.ಪಿ.ಐ.[ಎಂ] ನೇತೃತ್ವದ ಸರ್ಕಾರ ಮುಸ್ಲಿಮರ ಬಗ್ಗೆ ಕೋಮುವಾದಿ ಧೋರಣೆಯನ್ನು ಅನುಸರಿಸಿರುವುದಾಗಿಯೂ ಅದನ್ನು ಬಿ.ಜೆ.ಪಿ. ಪ್ರತಿಭಟಿಸಿರುವುದಾಗಿಯೂ ಬಿ.ಜೆ.ಪಿ.ಯ ರಾಷ್ಟ್ರೀಯ ಕಾರ್ಯಕಾರೀ ಸಮಿತಿಯ ಸಭೆ ಗೊತ್ತುವಳಿ ಅಂಗೀಕರಿಸಿರುವುದನ್ನು 'ಸ್ಟೇಟ್ಸ್‌ಮನ್' ಪತ್ರಿಕೆಯ ಅಕ್ಟೋಬರ್ 12ರ ಸಂಚಿಕೆ ಪ್ರಕಟಿಸಿದೆ. ಇದು ನಿಜಸ್ಥಿತಿಯ ಸಂಪೂರ್ಣ ವಿಕೃತಿಯಾಗಿದೆ. ಇತರ ರಾಜ್ಯಗಳಲ್ಲಿರುವಂತೆಯೇ ತ್ರಿಪುರದಲ್ಲೂ ಪೊಲೀಸ್ ಇಲಾಖೆಯಲ್ಲಿ ಮುಸ್ಲಿಮರ ಪ್ರಾತಿನಿಧ್ಯ ತೀರಾ ಕಡಿಮೆ. ಇದೇ ಕಾರಣದಿಂದಾಗಿಯೇ ಕೋಮುಗಲಭೆಗಳ ಸಮಯದಲ್ಲಿ ಅದು ಉತ್ತರ ಪ್ರದೇಶದಲ್ಲಾಗಲೀ ಅಥವ ಗುಜರಾತಿನಲ್ಲಾಗಲೀ ಅಲ್ಪಸಂಖ್ಯಾತರು ರಾಜ್ಯ ಪೊಲೀಸ್ ಪಡೆಗೆ ಬದಲಾಗಿ ಕೇಂದ್ರ ಮೀಸಲು ಪಡೆಗಾಗಿ ಒತ್ತಾಯಿಸುತ್ತಾರೆ. ತ್ರಿಪುರದಲ್ಲಿ ಎಡರಂಗ ಸರ್ಕಾರದ ಉದ್ಯೋಗ ನೀತಿಯು ಮುಸ್ಲಿಂ ಅಲ್ಪಸಂಖ್ಯಾತರನ್ನೊಳಗೊಂಡಂತೆ ಎಲ್ಲಾ ಅಲ್ಪಸಂಖ್ಯಾತರಿಗೂ ಉದ್ಯೋಗದಲ್ಲಾಗಲೀ ಶಿಕ್ಷಣದಲ್ಲಾಗಲೀ ಇನ್ನಿತರ ಅಭಿವೃದ್ಧಿ ಕಾರ್ಯಗಳಲ್ಲಾಗಲೀ ನ್ಯಾಯಯುತ ಪ್ರಾತಿನಿಧ್ಯವನ್ನು ನೀಡುವಂತಹುದಾಗಿದೆ. ತಾಂತ್ರಿಕ ಕಾರಣವೊಡ್ಡಿ ಬಿ.ಜೆ.ಪಿ. ಈ ಪದ್ಧತಿಯನ್ನು ತಡೆಯಲು ನ್ಯಾಯಾಲಯಕ್ಕೆ ಹೋಗಬಹುದು. ಆದರೆ ಉದ್ಯೋಗ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಎಡರಂಗ ಸರ್ಕಾರ ತನ್ನದೇ ಧೋರಣೆಯನ್ನು ಅನುಸರಿಸುತ್ತದೆ. ಈ ಧೋರಣೆಯನ್ನು ಕಾರ್ಯಗತಗೊಳಿಸುವಲ್ಲಿ ವಕ್ಫ್‌ಮಂಡಳಿ ಹೆಚ್ಚಿನ ಸಹಾಯ ನೀಡುತ್ತಿದೆ. ಇಂತಹಧೋರಣೆ ಮತ್ತು ಪ್ರಜಾಸತ್ತಾತ್ಮಕ ಮನೋಭಾವದಿಂದಾಗಿಯೇ ಅಲ್ಪಸಂಖ್ಯಾತರ ಸಮಸ್ಯೆಗಳನ್ನು ಪರಿಹರಿಸಿ ಕೋಮು ಐಕ್ಯತೆಯನ್ನು ಸಾಧಿಸಲು ಸಾಧ್ಯವಾಗಿದೆ. ಕಳೆದ 10 ವರ್ಷಗಳ ಅವಧಿಯಲ್ಲಿ ತ್ರಿಪುರದಲ್ಲಿ ಒಂದೇ ಒಂದು ಹಿಂದೂ-ಮುಸ್ಲಿಂ ಘರ್ಷಣೆಯೂ ಸಂಭವಿಸಿಲ್ಲ. ಹಿಂದೂ ಕೋಮುವಾದವನ್ನು ಪ್ರತಿನಿಧಿಸುವ ಬಿ.ಜೆ.ಪಿ.ಗೆತ್ರಿಪುರದಲ್ಲಿ ಸ್ಥಾನವಿಲ್ಲದೇ ಹೋಗಿರುವುದರಿಂದ ಅದು ಸಿಟ್ಟಿಗೆದ್ದಿದೆ ಯೆಂಬುದಾಗಿ ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿ ಹೇಳಿಕೆಯಲ್ಲಿ ತಿಳಿಸಿದ್ದಾರೆ. ●

REG No. BGW-148 MAG (2) PRB DECR 319/ 78-79

ರಾಜೀವ್‌ಗಾಂಧಿ ನಂತರ ಯಾರು ಎಂಬ ಪ್ರಶ್ನೆಯಲ್ಲ....

[ಒಂದನೇ ಪುಟದಿಂದ]

ಸಬ್‌ಮೇರಿನಂತಹ ವ್ಯವಹಾರದಲ್ಲಿ ದೇಶದ ಜನತೆಯ ಕೋಟ್ಯಾಂತರ ರೂ. ಭ್ರಷ್ಟಾಚಾರದಲ್ಲಿ ಮುಳುಗಿಸಿ ದ್ರೋಹ ಬಗೆಯಲಾಗಿದೆ.

ರಾಜೀವ್ ನಂತರ ಯಾರು ಎಂಬ ಪ್ರಶ್ನೆಯಲ್ಲ. ದೇಶದ ಎಲ್ಲಾ ಎಡ ಮತ್ತು ಪ್ರಜಾಸತ್ತಾತ್ಮಕ ಜಾತ್ಯಾತೀತ ಶಕ್ತಿಗಳು ಒಟ್ಟಾಗಿ ಅಲಿಪ್ತನೀತಿ, ವಿದೇಶಾಂಗ ನೀತಿ, ಸಾಮ್ರಾಜ್ಯಶಾಹಿ ವಿರೋಧಿ, ಜಾತ್ಯಾತೀತತೆಯ ರಕ್ಷಣೆ, ರಾಷ್ಟ್ರೀಯ ಸಮಗ್ರತೆ, ಕೇಂದ್ರ – ರಾಜ್ಯ ಸಂಬಂಧ, ಭ್ರಷ್ಟಾಚಾರ – ಕಪ್ಪುಹಣ, ಜೀವನಾವಶ್ಯಕ ವಸ್ತುಗಳ ವಿತರಣೆ, ರೈತ – ಕಾರ್ಮಿಕ ವಿರೋಧಿ ಶಾಸನಗಳ ವಿರುದ್ಧ ಮುಂತಾದ 17 ಅಂಶಗಳ ಬದಲಿ ಧೋರಣೆಯ ಕಾರ್ಯಕ್ರಮದ ಆಧಾರದಲ್ಲಿ ಮತೀಯ ಕೋಮುವಾದಿ ಬಿ.ಜೆ.ಪಿ. ಹಾಗೂ ಮುಸ್ಲಿಂಲೀಗ್‌ನಂತಹ ಪಕ್ಷಗಳನ್ನು ಹೊರತು ಪಡಿಸಿ ರಚಿಸಲ್ಪಡುವ ರಂಗವೇ ಪರ್ಯಾಯವೆಂದು ಅವರು ಹೇಳಿದರು.

ಸಮಾವೇಶ ಉದ್ಘಾಟಿಸಿ ಮಾತನಾಡಿದ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರು ಹಾಗೂ ಬೆಂಗಳೂರು ಜಿಲ್ಲಾ ಕಾರ್ಯದರ್ಶಿಗಳಾದ ಕಾ। ಎಸ್. ಸೂರ್ಯನಾರಾಯಣರಾವ್‌ರವರು ರಾಜೀವ್‌ಗಾಂಧಿಯವರ ಆರ್ಥಿಕನೀತಿ, ಕೈಗಾರಿಕಾ ನೀತಿ, ಶಿಕ್ಷಣ ಮುಂತಾದ ಎಲ್ಲಾ ಕ್ಷೇತ್ರಗಳಲ್ಲಿ ವಿಫಲವಾಗಿದ್ದು ಎಲ್ಲಾ ವಿಭಾಗದ ಜನತೆಯಲ್ಲಿ ಅಸಂತೃಪ್ತಿ, ಅಸಮಧಾನ ವ್ಯಕ್ತಗೊಳ್ಳುತ್ತಿದೆ ಎಂದರು. ಇತ್ತೀಚೆಗೆ ನಡೆದ ಕೇರಳ-ಪ. ಬಂಗಾಳ, ಹರಿಯಾಣ ಚುನಾವಣೆಗಳಲ್ಲಿ ಜನತೆ ಕಾಂಗ್ರೆಸ್‌ನ್ನು ಸಂಪೂರ್ಣ ತಿರಸ್ಕರಿಸಿರುವುದನ್ನು ಅವರು ಉದಾಹರಿಸಿದರು. ಹರಿಜನ – ಅಲ್ಪ ಸಂಖ್ಯಾತರ ಮೇಲೆ ಹಲ್ಲೆಗಳು ಹೆಚ್ಚಿದ್ದು ಕೋಮು ಶಕ್ತಿ ದಮನಗೊಳಿಸುವಲ್ಲಿ ರಾಜೀವಗಾಂಧಿ ಸರ್ಕಾರ ವಿಫಲಗೊಂಡಿವೆ. ದುಡಿಯುವ ಜನತೆ ಯಾವುದೇ ಜಾತಿ–ಮತ–ಭಾಷೆಗಳ ಆಧಾರದಲ್ಲಿ ಒಡಕುಂಟಾಗಲು ಆಸ್ಪದ ನೀಡದೆ ಐಕ್ಯತೆ ಕಾಪಾಡುವಂತೆ ಅವರು ಕರೆ ನೀಡಿದರು.

ಬಂಡವಾಳಶಾಹಿ ಪಕ್ಷಗಳ ಜೊತೆಯಿರುವ ದುಡಿಯುವ ಜನತೆಯನ್ನು ಸಂಘಟಿಸಬೇಕಾಗಿರುವುದು ನಮ್ಮ ಮೇಲಿರುವ ಜವಾಬ್ದಾರಿಯಾಗಿದೆ ಎಂದು ಹೇಳಿದ ಕಾ. ಸೂರಿ ಜನವಿಭಾಗದ ಸಮಸ್ಯೆಗಳ ಆಧಾರದಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಬೇಕೆಂದು ಕರೆ ನೀಡಿದರು. ಜಾತ್ಯಾತೀತ ಮೌಲ್ಯಗಳನ್ನು ಒಪ್ಪಿ ಎಲ್ಲಾ ಜಾತಿ-ಭಾಷೆ-ಧರ್ಮದ ಜನತೆಯನ್ನು ಸಮಾನದೃಷ್ಟಿಯಲ್ಲಿ ಕಾಣದ ಹಿಂದೂಭಾವನೆಯನ್ನು ಮಾತ್ರ ಮುಂದೆ ಮಾಡುವ, ಬಿ.ಜೆ.ಪಿ. ಯೊಂದಿಗೆ ಕಾರ್ಯಚರಣೆಯ ಪ್ರಶ್ನೆಯೇ ಇಲ್ಲವೆಂದರು.

ಸಾಲಮೇಳದ ಮೂಲಕ ಓಟಿಗಾಗಿ ರಾಜಕೀಯ ಮಾಡುವ ಜನಾರ್ಧನ ಪೂಜಾರಿಯವರು ನೀಡುವ 500 ರೂ· 1,000 ರೂ ಬಿಕ್ಷೆಯಿಂದ ಜನಸಾಮಾನ್ಯರ ಬದುಕಿನಲ್ಲಿ ಯಾವ ಬದಲಾವಣೆ ಬರಲು ಸಾಧ್ಯ ಎಂದು ಅವರು ಪ್ರಶ್ನಿಸಿದರು. ಭೂ ಸುಧಾರಣೆಯ ಜಾರಿ, ನಿರುದ್ಯೋಗ, ಶಿಕ್ಷಣ ಸೌಲಭ್ಯದಂತಹ ಮೂಲಭೂತ ಸಮಸ್ಯೆ ಪರಿಹಾರ ಮಾಡುವ ಕುರಿತು ಪೂಜಾರಿಯವರು ಏನು ಹೇಳುತ್ತಾರೆ ಎಂದು ಅವರು ಸವಾಲು ಹಾಕಿ ಜನತೆ ಇದನ್ನು ಮನಗಂಡು ಮೂಲ ಪ್ರಶ್ನೆಗಳು ಬಗೆಹರಿಸಲು ಸಂಘಟಿತರಾಗಿ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಡಿಸೆಂಬರ್ 9 ರಂದು ಸಿ. ಪಿ. ಐ. (ಎಂ), ಸಿ. ಪಿ. ಐ. ಫಾರ್ವರ್ಡ್ ಬ್ಲಾಕ್, ಆರ್. ಎಸ್. ಪಿ. ನಾಲ್ಕು ಪಕ್ಷಗಳ 24 ಸಾಮೂಹಿಕ ಸಂಘಟನೆಗಳ 10 ಲಕ್ಷ ಜನತೆಯ 'ದೆಹಲಿ ಚಲೋ' ದೇಶವ್ಯಾಪಿ ಚಳುವಳಿಯ ಅಂಗವಾಗಿ ದೇಶದ ಆರು ಭಾಗಗಳಿಂದ ಜಾಥ ಹೊರಡುತ್ತವೆ. ತಿರುವನಂತಪುರದಿಂದ ಹೊಸೂರು ಮೂಲಕ ಬೆಂಗಳೂರಿಗೆ ಬರುವ ಜಾಥಕ್ಕೆ ಉತ್ಸಾಹದಾಯಕ ಸ್ವಾಗತ ಬಯಸಿ ಮಾರ್ಗದುದ್ದಕ್ಕು ಸಭೆಗಳನ್ನು ನಡೆಸಲಾಗುವುದು. ನವಂಬರ್ 10 ರಿಂದ 20 ರವರೆವಿಗೆ ರಾಜ್ಯದಲ್ಲಿ ಸಿ.ಪಿ.ಐ. (ಎಂ) ಸಿ.ಪಿ.ಐ. ಮತ್ತು ಸಾಮೂಹಿಕ ಸಂಘಟನೆಯನ್ನೊಳಗೊಂಡು ರಾಜ್ಯವನ್ನು 4 ಭಾಗವಾಗಿ ವಿಂಗಡಿಸಿ ಮುಖಂಡರು ಪ್ರವಾಸ ಜಾಥ ನಡೆಸುವರು. ಪರ್ಯಾಯ ಧೋರಣೆ ಕಾರ್ಯಕ್ರಮವನ್ನು ಜನತೆಗೆ ವಿವರಿಸಿ ಮೆರವಣಿಗೆ ಬಹಿರಂಗ ಸಭೆ ನಡೆಸಲಾಗುವುದು. 'ದೆಹಲಿ ಚಲೋ' ರ್‍ಯಾಲಿಗೆ ಸಹಸ್ರಾರು ಸಂಖ್ಯೆಯಲ್ಲಿ ರೈತ - ಕಾರ್ಮಿಕ ವಿದ್ಯಾರ್ಥಿ ಯುವ ಜನತೆ ಪಾಲ್ಗೊಳಬೇಕೆಂದು ಕರೆ ನೀಡುವ ನಿರ್ಣಯವನ್ನು ಕಾ. ಎಸ್. ಆರ್. ಆರಾಧ್ಯ ಮಂಡಿಸಿದರು. ಕಾ। ಪಿ. ಜಗನ್ನಾಥ್‌ರವರು ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಕಾ. ಪಿ.ಕೆ. ಸುಬ್ರಮಣಿಯವರು ಧನ್ಯವಾದ ಅರ್ಪಿಸಿದರು. ●

ಸಮಗ್ರತೆ ರಕ್ಷಿಸಲು ಪಣ ತೊಟ್ಟ ದೆಹಲಿ ಸಮಾವೇಶ

[1ನೇ ಪುಟದಿಂದ]

ಸಕಾಲಿಕ ಮಧ್ಯಪ್ರವೇಶ

ಈ ಸಮಾವೇಶವನ್ನು ಸಂಘಟಿಸುವ ಮೂಲಕ, ಎಡಪಕ್ಷಗಳು ದೇಶದ ರಾಜಕೀಯ ಬೆಳವಣಿಗೆಯ ಈ ಘಟ್ಟದಲ್ಲಿ. ಸಕಾಲಿಕ ಮಧ್ಯಪ್ರವೇಶ ಮಾಡಿವೆ ಇದರಿಂದಾಗಿ ಬಿ.ಜೆ.ಪಿ. ಧೃತಿಕೆಟ್ಟಿದೆ. ಎಡಪಕ್ಷಗಳ ಮೇಲೆ ಅಪಪ್ರಚಾರದಲ್ಲಿ ತೊಡಗಿದೆ. ಎಡ ಪಕ್ಷಗಳನ್ನು ಪ್ರಜಾಸತ್ತಾತ್ಮಕ ಶಕ್ತಿಗಳಿಂದ ಪ್ರತ್ಯೇಕಿಸುವ ಅವರ ಪ್ರಯತ್ನ ಇಷ್ಟರವರೆಗೆ ನೀರಿನ ಮೇಲೆ ಹೋಮ ಮಾಡಿದಂತಾಗಿದೆ.

ನಮ್ಮ ಪಕ್ಷಕ್ಕೆ, ಇತರ ಎಡ ಪಕ್ಷಗಳ ಜತೆ ಜಾತ್ಯಾತೀತ ಬೂರ್ಜ್ವಾ ವಿರೋಧ ಪಕ್ಷಗಳು ಮತ್ತು ಶಕ್ತಿಗಳನ್ನು ಕೋಮುವಾದದ ವಿರುದ್ಧ ಹೋರಾಟಕ್ಕೆ ಒಗ್ಗೂಡಿಸುವ ಮೂಲಕ, ರಾಜೀವಗಾಂಧಿಯನ್ನು ಕಿತ್ತೊಗೆಯಲು ಬೇಕಾಗುವ ಬದಲಿ ನೀಡುವ ಗುರುತರವಾದ ಜವಾಬ್ದಾರಿ ಇದೆ. ಇದನ್ನು ವಿಫಲಗೊಳಿಸುವ ಬಿಜೆ.ಪಿ.ಯ ಪ್ರಯತ್ನಕ್ಕೆ ಈ ಸಮಾವೇಶ ಒಂದು ದೊಡ್ಡ ಕೊಡಲಿಯೇಟು. ಸಮಾವೇಶ ಬಿ.ಜೆ.ಪಿ.ಯ ಕೋಮುವಾದಿ ಆಟವನ್ನು ಸಂಪೂರ್ಣವಾಗಿ ಬಯಲು ಪಡಿಸಿದೆ. ಸಮಾವೇಶ ಈ ಹೋರಾಟವನ್ನು ದೇಶದ ಮೂಲೆ ಮೂಲೆಗೆ ಒಯ್ಯುವ ವ್ಯವಸ್ಥೆ ಮಾಡಲು ಒಂದು ಸಮಿತಿಯನ್ನು ನೇಮಿಸಿತು.

ಆದರೆ ಈ ಸಮಾವೇಶದ ಯಶಸ್ಸು, ಬೂರ್ಜ್ವಾ ವಿರೋಧಪಕ್ಷಗಳು ಕೋಮುವಾದ, ಪ್ರತ್ಯೇಕತಾವಾದದ ವಿರುದ್ಧ ತಮ್ಮ ಡೋಲಾಯಮಾನ ನೀತಿಯನ್ನು ಬದಲಾಯಿಸಿದ್ದಾವೆ ಎಂಬ ಸೂಚನೆಯನ್ನೇನೂ ನೀಡುವುದಿಲ್ಲ. ಈ ಪಕ್ಷಗಳಲ್ಲಿ ಇನ್ನೂ ಬಿ.ಜೆ.ಪಿ.ಯನ್ನು ವಿರೋಧಿ ರಂಗಕ್ಕೆ ತೆಗೆದುಕೊಳ್ಳಬೇಕೆನ್ನುವವರು ಬಹಳಷ್ಟು ಇದ್ದಾರೆ. ಆದರೆ ಎಡಪಕ್ಷಗಳ ಕರೆಗೆ ಜನತೆಯ ಉತ್ಸಾಹಕರ ಪ್ರತಿಕ್ರಿಯೆಯಿಂದಾಗಿ ಇಂತಹ ಅಭಿಪ್ರಾಯ ಹಿಮ್ಮೆಟ್ಟುತ್ತಿದೆ. ಅಕ್ಟೋಬರ್ 15ಕ್ಕೆ ಲಖನೌನಲ್ಲಿ ಎಡ ಮತ್ತು ಜಾತ್ಯಾತೀತಪ್ರಜಾಸತ್ತಾತ್ಮಕ ಪಕ್ಷಗಳು ಸಂಘಟಿಸಿದ ಕ್ರಾಂತಿಕಾರಿ ಮೋರ್ಚಾ ರ್‍ಯಾಲಿ, 1946ರ ನಂತರ ಅತ್ಯಂತ ದೊಡ್ಡದು ಎನ್ನಲಾಗಿದೆ.

ವಿರೋಧ ಪಕ್ಷಗಳ ಓಲಾಟಗಳ ವಿರುದ್ಧ ಹೋರಾಟ

ಆದರೂ ಎಡ ಮತ್ತು ಜಾತ್ಯಾತೀತ ಪ್ರಜಾಸತ್ತಾತ್ಮಕ ಪಕ್ಷಗಳ ಐಕ್ಯತೆಯ ಪ್ರಶ್ನೆ ಇನ್ನೂ ಬಗೆಹರಿಯದೆ ಉಳಿದಿದೆ. ಕೆಲವು ವಿರೋಧ ಪಕ್ಷಗಳು ಕೋಮುವಾದಿ, ಪ್ರತ್ಯೇಕತಾವಾದಿ ಶಕ್ತಿ ಸಂಘಟನೆಗಳೊಂದಿಗೆ ಮಾಡಿಕೊಂಡಿರುವ ಸಮಜಾಯಿಷಿರಾಜಿ ಸಾಮ್ರಾಜ್ಯಶಾಹಿಗಳ ದೇಶವನ್ನು ಬುಡಮೇಲು ಮಾಡುವ ಕೃತ್ಯಗಳಿಗೆ ಪೂರಕವಾಗಿದೆ. ಕಳೆದ ವಾರವಷ್ಟೇ ಮೂವರು ಸಿಖ್ ಪ್ರಧಾನ ಅರ್ಚಕರನ್ನು ಭೇಟಿ ಮಾಡಿದ ಜನತಾ ಅಧ್ಯಕ್ಷ ಚಂದ್ರಶೇಖರ್ ಅವರು ಖಾಲಿಸ್ತಾನ ಪದ ಅಲ್ಲ ಎನ್ನುವ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಎಸ್.ಜಿ.ಪಿ.ಸಿ. ಮತ್ತಿತರ ಪ್ರಜಾಸತ್ತಾತ್ಮಕ ಸಿಖ್ ಸಂಘಟನೆಗಳು ಅರ್ಥಹೀನವಾಗಿವೆಎಂಬ ಅವರ ಹೇಳಿಕೆ ಬಗ್ಗೆ ಚಂದ್ರಶೇಖರ್‌ಗೆ ಗೊತ್ತಿಲ್ಲವೇ? ಇವರನ್ನು ಖಲಿಸ್ತಾನವಾದಿ ಸಿಖ್ ಭಯೋತ್ಪಾದಕರೇ ಸಿಖ್ ಜನಾಂಗದಮೇಲೆಹೇರಿದ್ದಾರೆ ಎಂಬುದು ಅವರಿಗೆ ಗೊತ್ತಿಲ್ಲವೇ? ಇವರ ಕಾರಸ್ಥಾನಗಳಿಗೆ ರಾಜ್ಯದ ಹಿಂದೂ ಜನತೆ ಮಾತ್ರವಲ್ಲ ಸಿಖ್ ಜನತೆ ಸಹ ವಿರುದ್ಧವಾಗಿದ್ದಾರೆ.

ಮುಸ್ಲಿಂಲೀಗ್, ಜಮಾತೇ ಇಸ್ಲಾಮಿ ನಂತಹ ಮುಸ್ಲಿಂ ಕೋಮುವಾದಿ ಸಂಘಟನೆಗಳನ್ನು ಯಾವುದೇ ಸಭೆಗಳಿಗೆ ಕರೆಯಲು ಕೆಲವು ವಿರೋಧ ಪಕ್ಷಗಳು ಹಿಂಜರಿಯುತ್ತವೆ. ಇದಕ್ಕೆ ಕಾರಣ ಬಹುಸಂಖ್ಯಾತ ಹಿಂದೂ ಓಟುಗಳನ್ನು ಕಳಕೊಳ್ಳುವ ಭಯ. ಆದರೆ ಹಿಂದೂ ಕೋಮುವಾದಿ ಸಂಘಟನೆಗಳನ್ನು ಕರೆದರೆ, ಮುಸ್ಲಿಂ ಜನತೆ ದೂರವಾಗುತ್ತಾರೆ ಎಂಬ ಭಯ, ಯೋಚನೆ ಈ ಪಕ್ಷಗಳಿಗೆ ಇದ್ದಂತಿಲ್ಲ. ಬಿ.ಜೆ.ಪಿ. ಬಗ್ಗೆ ಅಲ್ಪಸಂಖ್ಯಾತ ಕೋಮುಗಳಿಗೆ ಯಾವ ರೀತಿಯ ಭಾವನೆ ಇದೆ ಎಂದು ಈ ಪಕ್ಷಗಳು ಅರಿತುಕೊಳ್ಳಬೇಕು.

ಕೋಮುವಾದದ ವಿರುದ್ಧ ಹೋರಾಡಲು ಏಕ ಮಾತ್ರ ಉಪಾಯವೆಂದರೆ ಅಲ್ಪಸಂಖ್ಯಾತ ಕೋಮಿನ ಜನರು ಉಳಿದ ಕೋಮಿನ ಜನರೊಂದಿಗೆ ಜಂಟಿ ಸಾಮಾನ್ಯ ಹೋರಾಟಗಳಲ್ಲಿ ಭಾಗವಹಿಸುವಂತೆ ಮಾಡುವುದು. ಇದರಿಂದಾಗಿಯೇ ಎಡ ಪಕ್ಷಗಳು ಪ್ರಬಲವಾಗಿರುವ ಪ.ಬಂಗಾಳದಲ್ಲಿ ಕೋಮುವಾದ ತಲೆಎತ್ತಲು ಸಾಧ್ಯವಾಗಿಲ್ಲ. ಸಾಮಾನ್ಯ ಹೋರಾಟಗಳನ್ನು ತಪ್ಪಿಸುವ ಯಾವುದೇ ಪ್ರಯತ್ನ ಕೋಮುಯಾಗಿರುತ್ತದೆ ಎಲ್ಲಾಕೋಮಿನಕೋಮುವಾದಿ ಪಕ್ಷಗಳುಇದನ್ನೇ ಮಾಡಲು ಪ್ರಯತ್ನ ಪಡುವುದು ಅಲ್ಪಸಂಖ್ಯಾತ ಕೋಮುವಾದಿಗಳ ಇಂತಹಕಪಿಮುಷ್ಟಿಯಿಂದ ಅಲ್ಪಸಂಖ್ಯಾತ ಕೋಮಿನ ಜನರನ್ನು, ಬಿಡುಗಡೆಮಾಡಿ ಸಾಮಾನ್ಯ ಪ್ರಜಾಸತ್ತಾತ್ಮಕ ಹೋರಾಟದಲ್ಲಿ ತೊಡಗಿಸುವುದು ನಮ್ಮ ಮುಖ್ಯ ಕರ್ತವ್ಯವಾಗಬೇಕು.

ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಸಾಮ್ರಾಜ್ಯಶಾಹಿಗಳ ಜತೆ ಶಾಮಿಲಾಗಿದ್ದ ಪ್ರತಿಗಾಮಿಶಕ್ತಿಗಳ ವಿರುದ್ಧ ಹೋರಾಟ ಆದರಅವಿಭಾಜ್ಯ ಅಂಗವಾಗಿತ್ತು. ಆದರೆ ಆ ಹೋರಾಟದ ಫಲಗಳನ್ನು ಹಾಳುಗೆಡವಲಾಗಿದೆ. ಉತ್ತಮ ಸಂಪ್ರದಾಯಗಳನ್ನು ಗಾಳಿಗೆತೂರಲಾಗಿವೆ. ಸಾಮ್ರಾಜ್ಯಶಾಹಿ ಮತ್ತು ಅವರ ಬಾಲಬಡುಕ ಪ್ರತ್ಯೇಕತಾವಾದಿಗಳ ವಿರುದ್ಧ ಸ್ವಾತಂತ್ರ್ಯ ಪೂರ್ವ ಪ್ರಜಾಸತ್ತಾತ್ಮಕ ಪ್ರಜ್ಞೆ ಮರುಕಳಿಸಬೇಕು. ಸಮಾವೇಶದ ಸಂದೇಶವನ್ನು ದೇಶದ ಮೂಲೆ ಮೂಲೆಗೆ ಒಯ್ಯುವುದು ದೇಶಪ್ರೇಮಿ ಪ್ರಜಾಸತ್ತಾತ್ಮಕ ಶಕ್ತಿಗಳ ಕರ್ತವ್ಯ. ○

ಭಯೋತ್ಪಾದಕತೆಯ ಖಂಡನೆ

ಡಿಸೆಂಬರ್ 20ರ ರಾತ್ರಿ ದಕ್ಷಿಣ ದೆಹಲಿಯ ಚಿತ್ತರಂಜನ್ ಪಾರ್ಕ ಮತ್ತು ಇತರೆಡೆ ಅಮಾನುಷ ಭಯೋತ್ಪಾದಕ ಹಲ್ಲೆಗಳಿಗೆ ಬಲಿಯಾದವರ ಕುಟುಂಬಗಳಿಗೆ ಸಿ.ಪಿ.ಐ.(ಎಂ)ನ ಪಾಲಿಟ್‌ಬ್ಯೂರೋ ತನ್ನ ಆಳವಾದ ಸಹಾನುಭೂತಿ ವ್ಯಕ್ತಪಡಿಸಿ 9 ಮಂದಿಯನ್ನು ಕೊಂದ ಖಾಲಿಸ್ತಾನೀ ಭಯೋತ್ಪಾದಕರ ಈ ರಾಷ್ಟ್ರ ವಿರೋಧಿ ಪ್ರಯತ್ನವನ್ನು ಎಲ್ಲಾ ಜನ ವಿಭಾಗಗಳು ಬಲವಾಗಿ ಖಂಡಿಸಬೇಕೆಂಬ ಕರೆ ನೀಡಿದೆ.

ಈ ರಾಷ್ಟ್ರ ವಿರೋಧಿಗಳೊಂದಿಗೆ ಏನಾದರೂ ಮಾತುಕತೆ ಆರಂಭಿಸಬೇಕೆಂಬ ಅಭಿಪ್ರಾಯ ಈಗಲೂ ಹೊಂದಿರುವವರು ಈಗಲಾದರೂ ಈ ಸಾಮ್ರಾಜ್ಯಶಾಹಿಗಳ ಬೆಂಬಲ ಪಡೆದಿರುವ ಈ ಉಗ್ರಗಾಮಿಗಳ ದುಷ್ಟ ಪಾತ್ರವನ್ನು ಅರಿತು ಕೊಳ್ಳಬೇಕು ಎಂದು ಹೇಳಿರುವ ಪಾಲಿಟ್‌ಬ್ಯೂರೋ ದೀಪಾವಳಿಯ ಸಮಯದಲ್ಲಿ ಭಯೋತ್ಪಾದಕ ಹಲ್ಲೆಗಳ ಪೂರ್ವಸೂಚನೆಯಿದ್ದರೂ ಎಚ್ಚರದಿಂದಿರುವಲ್ಲಿ ವಿಫಲಗೊಂಡಿರುವ ದೆಹಲಿ ಪೋಲೀಸ್ ಹಾಗೂ ಆಡಳಿತನ್ನು ಟೀಕಿಸಿದೆ.

ಸಿ.ಐ.ಟಿ.ಯು ರಾಜ್ಯ ಮಂಡಳಿಯ ಸದಸ್ಯರ ಗಮನಕ್ಕೆ

ಸಿ.ಐ.ಟಿ.ಯು. ರಾಜ್ಯ ಮಂಡಳಿಯ ಸಭೆ ಬೆಂಗಳೂರಿನ ಕಬ್ಬನ್ ಪಾರ್ಕನಲ್ಲಿರುವ ಎನ್.ಜಿ.ಓ. ಹಾಲ್‌ನಲ್ಲಿ ತಾ.9-11-87 ರಂದು 11ಗಂಟೆಗೆ ಜರಗುತ್ತದೆ. ಸದಸ್ಯರು ತಪ್ಪದೆಭಾಗವಹಿಸಬೇಕೆಂದುವಿನಂತಿ

ಸಿ. ನಂಜುಂಡಪ್ಪ
ಪ್ರಧಾನ ಕಾರ್ಯದರ್ಶಿ

Printed & Published by P. Ramachandra Rao on behalf of the Communist Party of India [Marxist] Karnataka State Committee
K. V. Temple Street, Sultanpet, Bangalore-560053
Sultanpet B-53 Phone : 75331
Editorial and Managerial Office : L-56, K. V. Temple Street,
Editor Ramachandra Rao
Managing Editor : N. K. Upadhyaya